ಶ್ರೀ ಎಂ. ವೀರಪ್ಪ ಮೊಯಿಲಿ:- ಅದು ಎರಡೂ ಕಾರ್ಯಕ್ರಮ ಬರುವ ವರ್ಷದ ಕಾರ್ಯಕ್ರಮದಲ್ಲಿ ಇದೆ. ಬರುವ ವರ್ಷ ಮಾಡೋಣ.

ಪ್ರಕಟಣೆ

ಜಂಟಿ ಪರಿಶೀಲನಾ ಸಮಿತಿಯ ಅವಧಿಯ ವಿಸ್ತರಣೆ

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, 1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಒಪ್ಪಿಸಲು 31ನೇ ಮಾರ್ಚ್ 1993ರವರೆಗೆ ಕಾಲಾವಧಿಯನ್ನು ವಿಸ್ತರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು:- ''1991ನೇ ಸಾಲಿನ ಕರ್ನಾಟಕ ಆಡಳಿತಾತ್ಮಕ ಪ್ರಕ್ರಿಯಾ ವಿಧೇಯಕಕ್ಕೆ ಸಂಬಂಧಿಸಿದಂತೆ ರಚಿಸಲಾದ ಜಂಟಿ ಪರಿಶೀಲನಾ ಸಮಿತಿ ವರದಿಯನ್ನು ಒಪ್ಪಿಸಲು 31ನೇ ಮಾರ್ಚ್ 1993ರವರೆಗೆ ಕಾಲಾವಧಿಯನ್ನು ವಿಸ್ತರಿಸಲು ಅನುಮತಿ ನೀಡುವುದು''.

(ಪ್ರಸ್ತಾವವನ್ನು ಅಂಗೀಕರಿಸಲಾಯಿತು)

ಕಾಲಾವಧಿಯನ್ನು ವಿಸ್ತರಿಸಲು ಸಭೆಯು ಒಪ್ಪಿಗೆ ನೀಡಿತು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈ ಸದನವನ್ನು

ಅಧ್ಯಕ್ಷರು:- ರೆಸಲ್ಯೂಷನ್ ಇದೆ ಅದನ್ನು ಮುಗಿಸಿಬಿಡೋಣ

ಶಾಸನಾತ್ಮಕ ನಿರ್ಣಯ

Sri Blasius M D'Souza (Labour Minister):- Mr.Speaker sir, I beg to move the following Resolution:-

WHEREAS this Assembly considers that it is desirable to have an uniform law throughout India for the regulation of Veterinary training and practice and for all matters connected therewith or ancillary and incidental thereto.

AND WHEREAS the subject matter of such a law is relatable mainly to matters enumerated in entries 15 and 32 of List II and entry 26 of List III in the Seventh Schedule of the Constitution of India;

AND WHEREAS Parliament has no power to make such a law for the States with respect to the matters enumerated in entries 15 and 32 of List II aforesaid except as provided in article 249 and 250 of the Constitution of India;

AND WHEREAS by virtue of the powers under Clause(1) of article 252 of the Constitution and in pursuance of the resolutions passed by all the Houses of the Legislatures of the States of Haryana, Bihar, Orissa, Himachal Pradesh and Rajasthan, Parliament has passed the Indian Veterinary Council Act, 1984 (52 of 1984);

AND WHEREAS the Indian Veterinary Council Act, 1984 (52 of 1984) extending in the first instance of the whole of the State of Haryana, Bihar, Orissa, Himachal Pradesh and Rajasthan and to all Union Territories;

AND WHEREAS the said Act will extent to other States as may adopt this Act by resolution passed in that behalf in pursuance of clause(1) of article 252 of the Constitution;

AND WHEREAS it appears to this House to be desirable that the Indian Veterinary Council Act, 1984 (52 of 1984) should be adopted in the State of Karnataka;

NOW THEREFORE, in pursuance of clause(1) of article 252 of the Constitution. this House hereby resolves that the Indian Veterinary Council Act, 1984 (52 of 1984) be adopted in the State of Karnataka.

ಅಧ್ಯಕ್ಷರು:- ಪ್ರಸ್ತಾವವನ್ನು ಮಂಡಿಸಲಾಯಿತು.

† ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರ ಗಮನಕ್ಕೆ ತರುತ್ತೇನೆ, ಇದು ಸ್ಟ್ಯಾಚುಟರಿ ರೆಸಲ್ಯೂಷನ್ ಆದರೂ ಸಹ 1984ನೇ ಇಂಡಿಯನ್ ವೆಟರ್ನರಿ ಕೌನ್ಸಿಲ್ ಆಕ್ಟ್ ಏನು ಪಾರ್ಲಿಮೆಂಟಿನಲ್ಲಿ ತಾವು ತಮ್ಮ ಕಾಲದಲ್ಲಿ ಮಾಡಿದ್ದೀರಿ ಅದನ್ನು ಇಲ್ಲಿ ನಾವು ಅನುಮೋದನೆ ಮಾಡಿಕೊಡಬೇಕಾಗಿದೆ.

ಅಧ್ಯಕ್ಷರು:- ನಮ್ಮ ಕಾಲದಲ್ಲಿ ಆದಮೇಲೆ ಅದನ್ನು ಮಾಡಬೇಕಲ್ಲ....

ಶ್ರೀ ಹೆಚ್. ಏಕಾಂತಯ್ಯ:- ಅಲ್ಲ, ನಾವು ಅದನ್ನು ಈ ರಾಜ್ಯದಲ್ಲಿ ಅನ್ವಯ ಮಾಡಬೇಕಾದರೆ we have to adopt it. ಅಡಾಪ್ಟ್ ಮಾಡಿಕೊಳ್ಳಬೇಕಾದರೆ ಇದರ ಬಗ್ಗೆ ಸವಿಸ್ತಾರವಾದ ಚರ್ಚೆ ಅತ್ಯಂತ ಅತ್ಯಾವಶ್ಯಕವಾಗಿದೆ. ಇದರ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಆದಂಥ ಚರ್ಚೆ ಇರಲಿ, ಮೊನ್ನೆ ದಿವಸ ಆಕ್ಟ್ ಪುಸ್ತಕ ಸಹ ಕೊಟ್ಟಿದ್ದಾರೆ, ಕೊಟ್ಟಂಥ ಆಕ್ಟ್ ಸಹ ಅಮೆಂಡೆಡ್ ಆಕ್ಟ್ ಅಲ್ಲ.

ಅಧ್ಯಕ್ಷರು:- ಬಹಳ ಅರ್ಜೆಂಟ್ ಆಗಿದೆ.

ಶ್ರೀ ಹೆಚ್. ಏಕಾಂತಯ್ಯ:- 84ನೇ ಇಸವಿಯಿಂದ 8 ವರ್ಷ ಕಾದಿದ್ದೇವೆ.

ಅಧ್ಯಕ್ಷರು:- ಮಿನಿಸ್ಟರ್‌ರವರನ್ನು ಕೇಳೋಣ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ:- ಸನ್ಮಾನ್ಯ ಅಧ್ಯಕ್ಷರೇ, ಇದರಿಂದ ಏನಾಗುತ್ತದೆ ಎಂದರೆ ನಮ್ಮ ವೆಟರ್ನರಿ ಡಾಕ್ಟರ್ಸ್‌ಗಳು ಆಲ್ ಇಂಡಿಯಾ ಲೆವೆಲ್‌ನಲ್ಲಿ ನೋಂದಾಣಿಕೆ ಆಗುತ್ತದೆ. ಇಷ್ಟರವರೆಗೆ ಅವರಿಗೆ ನಮ್ಮ ಕರ್ನಾಟಕ ಬಿಟ್ಟು ಬೇರೆ ರಾಜ್ಯಗಳಲ್ಲಿ ಪ್ರಾಕ್ಟೀಸ್ ಮಾಡಬೇಕಾದರೆ ಅಲ್ಲಿ ನೋಂದಾಣಿಕೆಯಾಗಿ ಪ್ರಾಕ್ಟೀಸ್ ಮಾಡಬೇಕಾಗಿತ್ತು. ಅದೇ ರೀತಿ ಅವರು ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ಹೋಗಬೇಕಾದರೆ ಈ ಒಂದು ಶಾಸನ ಯಾವ ಸೆಂಟ್ರಲ್ ಆಕ್ಟ್ ಇದೆ ನಾವು ಅದನ್ನು ಇಲ್ಲಿ ಅಡಾಪ್ಟ್ ಮಾಡಿದರೆ ಅವರಿಗೆ ಉನ್ನತ ಶಿಕ್ಷಣಕ್ಕೆ ಹೋಗಲಿಕ್ಕೆ ಸಹ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇಷ್ಟರವರೆಗೆ ಈ ಒಂದು ನಮ್ಮ ಕರ್ನಾಟಕ ವೆಟರ್ನರಿ ಆಕ್ಟ್‌ಗೆ ವಿಶ್ವದಲ್ಲಿ ಏನೂ ಮಾನ್ಯತೆ ಕೊಡಲಿಲ್ಲ.

ಅಧ್ಯಕ್ಷರು:- ಮಾನ್ಯತೆ ಇಲ್ಲವಂತೆ, ಮಾನ್ಯತೆ ಕೊಡಿಸೋಣ.

ಶ್ರೀ ಹೆಚ್. ಏಕಾಂತಯ್ಯ:- ಇದು ಅವರು ಹೇಳಿದಷ್ಟು ಸುಲಭ ಅಲ್ಲ. ಇದರ ಬಗ್ಗೆ ಡಿಬೇಟ್ ಆಗಬೇಕು, ಏತಕ್ಕೆ ಆಗಬೇಕೆಂದು ಹೇಳುತ್ತೇನೆ. 1984ನೇ ಇಸವಿಯಲ್ಲಿ ತಾವು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಾಗ ಡಿಬೇಟ್ ಆಗಿದೆ. ಆ ಡಿಬೇಟ್ ಏನೇನಾಗಿದೆ ಎಂದು ನಾನು ಸುಮ್ಮನೆ ನೋಡಿದೆ, ಡಿಬೇಟ್ ಆದಂಥ ಸಂದರ್ಭದಲ್ಲಿ ಇದಕ್ಕೆ ಬಹಳ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಇದು ಇಂಡಿಯನ್ ಮೆಡಿಕಲ್ ಕೌನ್ಸಿಲ್ ಆಕ್ಟ್ ಏನಿದೆ ಮತ್ತು ಡೆಂಟಲ್ ಕೌನ್ಸಿಲ್ ಆಕ್ಟ್ ಏನಿದೆ ಅದರ ಅನ್ವಯದಲ್ಲಿ ತಂದಿದ್ದಾರೆ. ಕೇವಲ ಇದು ರೆಗ್ಯುಲೆಟಿಂಗ್ ದಿ ಪ್ರಾಕ್ಟೀಸಸ್ ಅಂಡ್ ಕಾಂಡಕ್ಟ್ ಮಾತ್ರವಲ್ಲ. ಅದರ ಜೊತೆಗೆ ರಿಜಿಸ್ಟರಿಂಗ್ ಅಥಾರಿಟಿ ಇದೆ. ನಮ್ಮಲ್ಲಿ ಬಿ.ವಿ.ಎಸ್.ಸಿ. ಎಂದು ಏನು ಒಂದು ಡಿಗ್ರಿ ಇದೆ ಅದಕ್ಕೆ ರೆಕಾಗ್ನಿಷನ್ ಬೇಕಾಗಿದೆ. ಆದರೆ ಅದನ್ನು ಹೊರತುಪಡಿಸಿ ಬೇರೆ ಯಾವುದಾದರೂ ಪದವೀಧರರಾಗಿದ್ದರೆ, ಅವರು ಈ ದೇಶದಲ್ಲಿ ಪ್ರಾಕ್ಟೀಸ್ ಮಾಡುವಂತಹ ಅಧಿಕಾರ ಇರುವುದಿಲ್ಲ. ಇವತ್ತಿನ ದಿವಸ ನಮ್ಮಲ್ಲಿರುವಂತಹ ಆಸ್ಪತ್ರೆಗಳು ಏನಿವೆ, ಸರಕಾರಿ ಆಸ್ಪತ್ರೆಗಳಲ್ಲೂ ಸಹ ಈ ರೆಕಾಗ್ನೈಸ್ಡ್ ಡಿಗ್ರಿ ತೆಗೆದುಕೊಂಡಂಥ ಡಾಕ್ಟರ್ಸ್ ಇಲ್ಲ. ಇನ್ನೂ ಅನೇಕ ವಿಚಾರಗಳು ಇವೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜಾ:- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಇದು ಹರ್ಯಾಣ, ಬಿಹಾರ್, ಹಿಮಾಚಲ ಪ್ರದೇಶ, ರಾಜಾಸ್ಥಾನದಲ್ಲಿ....

ಅಧ್ಯಕ್ಷರು:- ಏಕಾಂತಯ್ಯನವರೇ ಸೆಕ್ಷನ್ 20 ನೋಡಿ.

"Notice of death on receiving the notice of a death, the registered veternary". practioner shall forth with transmit by post to the Registrar a certificate on his own hand of such death with the particulars of time and place of death and may charge the cost of such certificate and transmission as an expense of his office. ಇದೆಲ್ಲಾ ಯಾರಾದರೂ ಸತ್ತರೆ ಅವನು ತಕ್ಷಣ ತಿಳಿಸಬೇಕೆಂದು ಇದೆ.

ಶ್ರೀ ಹೆಚ್. ಏಕಾಂತಯ್ಯ:- ಸನ್ಮಾನ್ಯ ಅಧ್ಯಕ್ಷರೇ ನಾನು ಕೇಳುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಇವತ್ತು ಎಷ್ಟು ವೆಟರಿನರಿ ಆಸ್ಪತ್ರೆಗಳನ್ನು ಇಟ್ಟಿದ್ದೀರಿ. ಪರ್ಯಾಯ ವ್ಯವಸ್ಥೆ ಸರ್ಕಾರ ಏನು ಮಾಡಿದೆ?

ಅಧ್ಯಕ್ಷರು:- ಕರ್ನಾಟಕ ರಾಜ್ಯದಲ್ಲಿ ನೊಂದಾಯಿತರಾದ ಪಶುವೈದ್ಯರಿಗೆ ಭಾರತ ದೇಶದ ಇತರ ರಾಜ್ಯಗಳಲ್ಲೂ ಉದ್ಯೋಗ ಮಾಡಲು ಅವಕಾಶ ಇರುವುದು. ಈಗ ಬೇರೆ ರಾಜ್ಯಗಳಲ್ಲಿ ವೃತ್ತಿಪರ ಕೆಲಸಗಳಲ್ಲಿ ತೊಡಗಬೇಕಾದಾಗ ಅಲ್ಲಿ ನೊಂದಾಯಿಸಿಕೊಳ್ಳಬೇಕಾಗುವುದು ಭಾರತೀಯ ಪಶುವೈದ್ಯ ಪರಿಷತ್ತಿನಲ್ಲಿ ಅನುಕೂಲ ಇದೆ. ಇವೆಲ್ಲಾ ಅನುಕೂಲಗಳು ಇವೆ ಒಪ್ಪಿಕೊಳ್ಳಿ.

ಶ್ರೀ ಹೆಚ್. ಏಕಾಂತಯ್ಯ:- ಇಲ್ಲಾ ಇಲ್ಲಾ....

ಅಧ್ಯಕ್ಷರು:- ತೊಂದರೆ ಏನೂ ಆಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಚರ್ಚೆ ಮಾಡೋಣ. ಏತಕ್ಕೆ ಚರ್ಚೆ ಮಾಡಬೇಕು ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು:- ಅನುಕೂಲ ಆಗುವುದಕ್ಕೆ ಚರ್ಚೆ ಏತಕ್ಕೆ ಮಾಡಬೇಕು? ಅನಾನುಕೂಲಗಳು ಆಗುವುದಾದರೆ ಚರ್ಚೆ ಮಾಡಬೇಕು.

ಶ್ರೀ ಹೆಚ್. ಏಕಾಂತಯ್ಯ:- ಅನುಕೂಲ ಮಾತ್ರ ಅಲ್ಲ. ಅನಾನುಕೂಲಗಳು ಇವೆ. ಅದನ್ನು ಚರ್ಚೆ ಮಾಡೋಣ. ಆ ಅನಾನುಕೂಲಗಳು ಏನ್ನು ಎನ್ನುವುದನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ.

Sri M.VEERAPPA MOILY:- Suppose we don't consider or reject, what the country will think of us. That means we would like to live in an Island. This is a statutory resolution. The Council has already passed it.

ಅಧ್ಯಕ್ಷರು:- ಆಮೇಲೆ ಇನ್ನೊಂದು ನೋಡಿ ಕೇಂದ್ರ ಸರ್ಕಾರದಿಂದ ಧನಸಹಾಯ ಬರುತ್ತದೆ. Also, this is about bringing up uniformity in the entire country.

ಶ್ರೀ ಹೆಚ್. ಏಕಾಂತಯ್ಯ:- ಇಲ್ಲಾ ಇಲ್ಲಾ.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದು ಒಂದು ರೀತಿ ರಾಷ್ಟ್ರೀಯ ಕರ್ತವ್ಯದ ದೃಷ್ಟಿ ಇದೆ. ಬಿಲ್‌ನಲ್ಲಿ ಏನಿದೆ? ನಷ್ಟ ಏನೂ ಇಲ್ಲ. ಏಕೆಂದರೆ ಎಂ.ಬಿ.ಬಿ.ಎಸ್.ಗೆ ಐ.ಎಂ.ಸಿ. ರೆಕಗನೈಜ್ ಮಾಡುತ್ತಾರೆ. ನಾಳೆ ಎಂ.ಬಿ.ಬಿ.ಎಸ್ ಡಾಕ್ಟರ್ಸ್ ಹೇಳಬಹುದು ನಮಗೆ.ರೆಕಗ್ನಿಷನ್ ಕೊಡಿ ನಾವೇ ರೆಕಗ್‌ನೈಜ್ ಮಾಡಿಕೊಂಡು ಕರ್ನಾಟಕ ರಾಜ್ಯದ ಒಳಗಡೆ ಪ್ರಾಕ್ಟೀಸ್ ಮಾಡಬೇಕು. ಹೊರ ರಾಜ್ಯಗಳಲ್ಲಿ ಅವರನ್ನು ರೆಕಗನೈಜ್ ಮಾಡುವುದಿಲ್ಲ. ಬೇರೆ ರಾಷ್ಟ್ರಗಳಿಗೆ ಹೈಯರ್ ಸ್ಟಡೀಸ್‌ಗೆ ಹೋಗುವುದಕ್ಕಾಗುವುದಿಲ್ಲ. Do you want that these Veterinary Doctors, should they remain within the territory of Karnataka or should they go all over the country or abroad? ಇದರಿಂದ ಏನಾಗುತ್ತದೆ ನಮ್ಮ ಸಂಕುಚಿತ ಪ್ರವೃತ್ತಿಗೆ ಕರ್ನಾಟಕ ರಾಜ್ಯದ ಜನ ಹೋದರು ಎನ್ನುವ ಅಪವಾದ ಬರುತ್ತದೆ. ನಾವು ಪಾಸ್ ಮಾಡದಿದ್ದರೂ It will become an Act. Even if you don't pass it, it is going to become an Act because the Parliament has passed and the rest of the States have also passed.

SRI H.EKANTHAIAH:- I am sorry.

SRI M.VEERAPPA MOILY:- You need not feel sorry. You must be proud of it. This is such an important Act, we are here to perform a nation duty. Do you want this State not to perform a national duty like this in the best interest of those graduates and those students? If we don't pass it, I think, we will be doing a great disservice to those graduates who are passing out from our colleges. I want my graduates also to get national recognition. Am I going to say that no, no, I don't want national recognition, I want only a State recognitions there are no minus side.

ಅಧ್ಯಕ್ಷರು:- ಸರಿ ಮೂವ್ ಮಾಡಿ. ನೋಡೋಣ.

ಶ್ರೀ ಹೆಚ್. ಏಕಾಂತಯ್ಯ:- ನನ್ನ ಮಾತನ್ನು ಸ್ವಲ್ಪ ದಯವಿಟ್ಟು ಕೇಳಬೇಕು.

ಅಧ್ಯಕ್ಷರು:- ಚರ್ಚೆ ಮಾಡಿ.

ಶ್ರೀ ಹೆಚ್. ಏಕಾಂತಯ್ಯ:- ಚರ್ಚೆ ಮಾಡಲಿಕ್ಕೆ ನಾವು ತಯಾರು. ಇನ್ನು ಒಂದು ಗಂಟೆ ಆದರೂ ಪರವಾಗಿಲ್ಲ ಅದಕ್ಕಿಂತ ಮೊದಲು ಅವರು ತಪ್ಪು ತಪ್ಪು ಅಭಿಪ್ರಾಯವನ್ನು ತಿಳಿದುಕೊಂಡಿದ್ದರೆ ಕನಿಷ್ಟ ಪಕ್ಷ ನಾನು ಅಧ್ಯಕ್ಷರ ಗಮನಕ್ಕೆ ತರುವ ಪ್ರಯತ್ನ ಮಾಡುತ್ತೇನೆ.

ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಹೇಳಿದರು ಅದು ಸರಿಯಾದಂಥ ವಸ್ತು ಸ್ಥಿತಿಯಲ್ಲ, ಅದು ಈಗಾಗಲೇ ಕಾನೂನು ಆಗಿದೆ. ನಾವು ಇದನ್ನು ಒಪ್ಪಬೇಕಾದಂತಹ ಪರಿಸ್ಥಿತಿ ಇಲ್ಲ. ಇದು 1984ರಲ್ಲಿ ಆಗಿರುವಂತಹ ಕಾನೂನು. ಕೇಂದ್ರ ಸರ್ಕಾರ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಂಜೂರಾತಿಯಾಗಿರತಕ್ಕಂಥ ಕಾನೂನು. ಈ ಕಾನೂನು ಸಂವಿಧಾನದ 252(1)ರ ಪ್ರಕಾರ ಆಗಿದೆ. 252(1)ರ ಪ್ರಕಾರ ಆಗಬೇಕಾದರೆ ಎರಡಕ್ಕಿಂತ ಹೆಚ್ಚು ರಾಜ್ಯಗಳಲ್ಲಿ ರೆಜಲೂಶನ್ ಪಾಸ್ ಆಗಬೇಕು. ಆ ರಾಜ್ಯಗಳಿಗೆ ಮತ್ತು ಸಂಬಂಧಪಟ್ಟಂತಹ ಕೇಂದ್ರ ಸರ್ಕಾರ ಪಾರ್ಲಿಮೆಂಟ್ ಕಾನೂನು ಮಾಡಲಿಕ್ಕೆ ಅವಕಾಶ ಉಪಯೋಗಿಸಿಕೊಂಡು ಮಾಡಿದ್ದಾರೆ. ಅದಾದ ನಂತರ 251(2)ರ ಪ್ರಕಾರ ಬೇರೆ ಯಾವುದೇ ರಾಜ್ಯಗಳು ಈ ಕಾನೂನನ್ನು ತನ್ನ ರಾಜ್ಯಗಳ ವ್ಯಾಪ್ತಿಯಲ್ಲಿ ತರುವುದಕ್ಕೆ ಇಂತಹ ಒಂದು ರೆಜಲೂಶನ್ ಅವಶ್ಯಕತೆ ಇದೆ ಅಂತಹ ರೆಜಲೂಶನ್ ಅವರು ತಂದಿರುವುದು. ಅದರಿಂದ ಆಕಾಶವೇನು ಕೆಳಗೆ ಬೀಳುವುದಿಲ್ಲ. 1984ರಲ್ಲಿ ಆದಂತಹ ಕಾನೂನು. ಈ ಕಾನೂನನ್ನು ಇವತ್ತು ಏನು ತಂದಿದ್ದಾರೆ ಇನ್ನು 16 ದಿವಸ ಬಿಟ್ಟು ತಂದರೆ ಏನೂ ಆಗುವುದಿಲ್ಲ.

9.10 ಪಿ.ಎಂ

ಅವರು ಏನು ಹೇಳಿದರು? ನಾವು ಮಾಡದೆ ಇದ್ದರೂ ಕಾನೂನು ಆಗುತ್ತದೆ ಎಂದು. ನಾವು ಮಾಡದೇ ಇದ್ದರೂ ಈಗಾಗಲೇ ಕಾನೂನು ಆಗಿದೆ. ಬೇರೆ ಬೇರೆ ರಾಜ್ಯಗಳಲ್ಲಿ ಇದು ಜಾರಿಯಲ್ಲಿದೆ. ಇವತ್ತಿನ ದಿವಸ ಆ ಕಾನೂನು 251(2)ರ ಪ್ರಕಾರ,

ಅಧ್ಯಕ್ಷರು:- ಕೌನ್ಸಿಲ್ ಪಾಸ್ ಮಾಡಿದೆಯಂತೆ.

ಶ್ರೀ ಹೆಚ್. ಏಕಾಂತಯ್ಯ:- ಅದು ಬೇರೆ ಪ್ರಶ್ನೆ, ಹೇಳುವುದಕ್ಕೆ ಅವಕಾಶ ಕೊಟ್ಟರೆ ಹೇಳುತ್ತೇನೆ. ಇದರ ಉದ್ದೇಶ ಏನು ಅಂದರೆ, ಇದರಲ್ಲಿ ಕೇವಲ ನಾನು ಮಾತ್ರ ಅಲ್ಲ, ಎಲ್ಲಾ ಸದಸ್ಯರು ಸಕ್ರಿಯವಾಗಿ ಭಾಗವಹಿಸುವುದು ಅವಶ್ಯಕತೆ ಇದೆ. ಏತಕ್ಕೋಸ್ಕರ ಇದೆ ಎನ್ನುವ ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಈಗ ಇಂಡಿಯನ್ ಕೌನ್ಸಿಲ್ ಆಕ್ಟ್ ಏನಿದೆ, ಮೆಡಿಕಲ್ ಕೌನ್ಸಿಲ್ ಆಕ್ಟ್ ಏನಿದೆ, ಅದೇ ರೀತಿ ಇದು ಇಂಡಿಯನ್ ವೆಟರ್ನರಿ ಕೌನ್ಸಿಲ್ ಆಕ್ಟ್ ಎನ್ನುವ ಮಾತನ್ನು ಈಗಾಗಲೇ ತಾವು ಹೇಳಿದ್ದೀರಿ. ಇದರಲ್ಲಿ ಬಹಳ ಮುಖ್ಯವಾದಂಥಾದ್ದು ಏನಿದೆ ಎಂದರೆ, ಒಂದು ಆಲ್ ಇಂಡಿಯಾ ಮಟ್ಟದಲ್ಲಿ ವೆಟರ್‌ನರಿ ಕೌನ್ಸಿಲ್‌ನ್ನು ನಾವು ಪ್ರತಿಷ್ಠಾಪನೆಗೊಳಿಸುವುದು, ಅದೇ ರೀತಿಯಲ್ಲಿ ರಾಜ್ಯದಲ್ಲಿಯೂ ಮಾಡುವುದು, ಮತ್ತು ಕೆಲವು ಹಕ್ಕುಗಳನ್ನು ಈ ಒಂದು ಬಿವಿಎಸ್‌ಸಿ ಗ್ರ್ಯಾಜುಯೇಟ್ಸ್‌ಗೆ ಕೊಡುತ್ತಿದ್ದೇವೆ. ಅವರನ್ನು ಹೊರತುಪಡಿಸಿ ಯಾರು ರಿಜಿಸ್ಟರ್ಡ್ ಮೆಡಿಕಲ್ ಪ್ರಾಕ್ಟೀಷನರ್ಸ್ ಇದ್ದಾರೆ? ಅವರನ್ನು ಹೊರತುಪಡಿಸಿ, ಬೇರೆಯವರು ಪ್ರಾಕ್ಟೀಸ್ ಮಾಡುವುದಕ್ಕೆ ಕಾನೂನು ಪ್ರಕಾರ ಈ ರಾಜ್ಯದಲ್ಲಿ ಅವಕಾಶ ಇಲ್ಲ. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಸುಮಾರು ಎರಡೂವರೆ ಕೋಟಿ ಜಾನುವಾರುಗಳಿವೆ. ಸುಮಾರು ಒಂದೂವರೆ ಕೋಟಿ ಕೋಳಿಗಳಿವೆ. ಸುಮಾರು 4 ಕೋಟಿ ಏನು ಜಾನುವಾರುಗಳಿವೆ ಇವುಗಳನ್ನು ನೋಡಿಕೊಳ್ಳಲಿಕ್ಕೆ ನಮ್ಮಲ್ಲಿ ಸುಮಾರು 2,369 ಆಸ್ಪತ್ರೆ ಮತ್ತು ಬೇರೆ ಬೇರೆ ಕೇಂದ್ರಗಳನ್ನು ಮಾಡಿದ್ದೇವೆ. ಆದರೆ, ಈ ಎಲ್ಲಾ ಆಸ್ಪತ್ರೆ ಮತ್ತು ಕೇಂದ್ರಗಳಲ್ಲಿ ನಾವು ಇವತ್ತಿನ ದಿವಸ, ಯಾರು ರಿಜಿಸ್ಟರ್ಡ್ ವೆಟರ್ನರಿ ಪ್ರಾಕ್ಟೀಷನರ್ಸ್ ಎಂದು ಹೇಳಿದ್ದೇವೆ, ಯಾವ ಮಿನಿಮಮ್ ಕ್ವಾಲಿಫಿಕೇಷನ್ ಎಂದು ಹೇಳಿದ್ದೀರಿ, ಆ ಕ್ವಾಲಿಫಿಕೇಷನ್ 'ಹೊರತುಪಡಿಸಿದವರಿಗೆ ಇದನ್ನು ತಪಾಸಣೆ ಮಾಡುವ ಮತ್ತು ಚಿಕಿತ್ಸೆ ಮಾಡುವಂಥ ಅಧಿಕಾರ ಇಲ್ಲ. ಅದು ಕಾನೂನಿಗೆ ವಿರುದ್ಧವಾಗುತ್ತದೆ. ಆದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಮಾಡದೆ, ಅದರ ಬಗ್ಗೆ ಚರ್ಚೆ ಮಾಡದೆ ಇವತ್ತಿನ ದಿವಸ ಈ ಕಾನೂನನ್ನು ಅವಸರವಸರವಾಗಿ ತರುತ್ತೇವೆಂದರೆ ಇದಕ್ಕೆ ಏನು ಹೇಳೋಣ ಸ್ವಾಮಿ? ನಾನು ತಮಗೆ ಕೇಳಿಕೊಳ್ಳುವುದೇನೆಂದರೆ, ಏನು ನಮ್ಮಲ್ಲಿ ವೆಟರ್‌ನರಿ ಪ್ರಾಕ್ಟೀಷನರ್ಸ್ ಇದ್ದಾರೆ? ಅದು ಬಿವಿಎಸ್‌ಸಿ ಆದವರಿಗೆ ಮಾತ್ರ ಇದೆ. ನಮ್ಮ ಊರಿನಲ್ಲಿ

ವೆಟರ್‌ನರಿ ಡಿಸ್ಪೆನ್ಸರಿ ಎಂದು ಇರಬಹುದು, ಅಥವಾ ವೆಟರ್‌ನರಿ ಸೆಂಟರ್ ಎಂದು ಇರಬಹುದು, ಅದರಲ್ಲಿ ವೆಟರ್‌ನರಿ ಲಿವ್‌ಸ್ಟಾಕ್‌ಮ್ಯಾನ್ ಇಲ್ಲ; ಬೇರೆ ಯಾರೋ ಇದ್ದಾರೆ. ಸ್ವಾಮಿ, ಅವರು ಯಾವ ರೀತಿ ಔಷಧಿಗಳನ್ನು ಕೊಡಬೇಕು? ಇವೆಲ್ಲಾ ಪ್ರಶ್ನೆಗಳಿವೆ. ಈ ದೇಶದ ಜಾನುವಾರು ಸಂಪತ್ತಿಗೆ ಇದು ಸಂಬಂಧಪಟ್ಟಿರುವುದರಿಂದ, ಕೇವಲ 15 ದಿವಸಗಳಲ್ಲಿ ಏನು ಆಗುವುದಿಲ್ಲ. 1984ನೇ ಇಸವಿಯಿಂದ 8 ವರ್ಷಗಳ ಕಾಲ ಏನು ಈ ಕಾನೂನು ತರಲಿಕ್ಕೆ ಸಾಧ್ಯವಾಗಲಿಲ್ಲ? ಅದನ್ನು ಕೇವಲ ಇನ್ನು 15 ದಿವಸ ಬಿಟ್ಟ ಮೇಲೆ ತಂದರೆ ಏನಾದರೂ ಪ್ರಪಂಚ ತಲೆಕೆಳಗಾಗಿ ಬೀಳುತ್ತದೆಯೇ? ಚರ್ಚೆ ಮಾಡುವುದಕ್ಕೆ ಒಂದು ಗಂಟೆಯಾದರೂ ತಯಾರಾಗಿದ್ದೇನೆ. ನನ್ನದೇನೂ ತಕರಾರಿಲ್ಲ. ಇದಕ್ಕೋಸ್ಕರ 3 ದಿವಸದಿಂದ ಕಾದಿದ್ದೇನೆ. ಸನ್ಮಾನ್ಯ ಅಧ್ಯಕ್ಷರೆ, ಅದಕ್ಕಿಂತ ಮೊದಲು ಕನ್‌ಕರೆಂಟ್ ಲಿಸ್ಟ್‌ನಲ್ಲಿ ಈ ವಿಚಾರ ಇದೆ ಎನ್ನುವ ಮಾತನ್ನು ಹೇಳುತ್ತಾರೆ. ಎಷ್ಟು ಅವಸರವಾಗಿ ತಂದಿದ್ದಾರೆಂದು ಹೇಳುತ್ತೇನೆ. ಮತ್ತೊಂದು ಕಡೆ ಕನ್‌ಕರೆಂಟ್ ಲಿಸ್ಟ್‌ನಲ್ಲಿರುವ ಕಾನೂನಿಗೆ, ವಿಷಯಕ್ಕೆ ಸಂಬಂಧಪಟ್ಟಂತೆ,

ಅಧ್ಯಕ್ಷರು:- ಮಿನಿಸ್ಟರ್ ಏನು ಹೇಳುತ್ತಾರೆ ಕೇಳೋಣ.

ಶ್ರೀ ಸಿ. ಬೈರೇಗೌಡ:- ನಮಗೆ ಬಂದ ತಾಪತ್ರಯ ಏನೆಂದರೆ, ಅವರು ಕೋಳಿ, ಕುರಿ ಎಲ್ಲಾ ಲೆಕ್ಕ ಹಾಕಿಕೊಂಡು ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ಒಂದೂವರೆ ಕೋಟಿ ಕೋಳಿ ಎಂದು ಹೇಳಿದ್ದಾರೆ. ಅದರಲ್ಲಿ ತಿಂದಿರುವುದೆಷ್ಟೋ, ಉಳಿದಿರುವುವು ಎಷ್ಟೊ?

ಅಧ್ಯಕ್ಷರು:- ಈ ದೇಶದಲ್ಲಿ ಕುರಿಗಳ ಸಂಖ್ಯೆ ಅವರು ಹೇಳಿರುವುದಕ್ಕಿಂಥ ಜಾಸ್ತಿ ಇದೆ.

ಶ್ರೀ ಹೆಚ್. ಏಕಾಂತಯ್ಯ:- ಇದು ನನ್ನ ಸ್ವಂತ ಅನುಭವದಿಂದಲ್ಲ, ಸರ್ಕಾರ ಕೊಟ್ಟ ಅಂಕಿಅಂಶದಿಂದ ಇದನ್ನು ಹೇಳುತ್ತಿದ್ದೇನೆ.

ಅಧ್ಯಕ್ಷರು:- ನೀವು ಹೇಳಿದ್ದಿರಲ್ಲಾ ಕುರಿಗಳ ಸಂಖ್ಯೆ, ಕುರಿಗಳ ಸಂಖ್ಯೆ ಜಾಸ್ತಿ ಇದೆ ನಮ್ಮ ದೇಶದಲ್ಲಿ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಮಂತ್ರಿಗಳು):- ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳಿದ ಹಾಗೆ, ನಮ್ಮ ವೆಟರ್‌ನರಿ ಡಾಕ್ಟರ್ಸ್ ಯಾರು ಇದ್ದಾರೆ? ಅವರಿಗೆ ಇದರಿಂದ ಬಹಳ ಪ್ರಯೋಜನವಾಗುತ್ತದೆ. ಇತ್ತೀಚೆಗೆ ಕೇರಳ ಸರ್ಕಾರದವರೂ ಸಹ ಇದನ್ನು ಅಂಗೀಕರಿಸಿದ್ದಾರೆ. ನಮ್ಮ ಶ್ರೀಮಾನ್ ಏಕಾಂತಯ್ಯನವರು ಹೇಳಿದ ಹಾಗೆ ನಾವು ಆರ್ಟಿಕಲ್ 2 ಪ್ರಕಾರ ರೆಸೆಲ್ಯೂಷನ್ ಮಾಡಿ ಅನುಮೋದನೆ ಕೊಟ್ಟರೆ ಮಾತ್ರ ಇದು ಜಾರಿಗೆ ಬರುತ್ತದೆ. ಆದಕಾರಣ ಈ ರೆಸೆಲ್ಯೂಷನ್‌ನ್ನು ನಾವು ಮೂವ್ ಮಾಡುತ್ತೇವೆ. ಪಾರುಮಾಡಿ ಇದನ್ನು ಸರ್ವಾನುಮತದಿಂದ ಅಂಗೀಕರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಅದಕ್ಕೂ ಮುಂದೆ ಈ ರೆಸೆಲ್ಯೂಷನ್ ಅನ್ನು ನಾನು ಓದುತ್ತೇನೆ. ಪಶುವೈದ್ಯರ ತರಬೇತಿ ಮತ್ತು ವೃತ್ತಿ ಮತ್ತು ಅದಕ್ಕೆ ಸಂಬಂಧಪಟ್ಟ ಪೂರಕವಾದ ಮತ್ತು ಅನುಸಂಗಿಕ ವಿಷಯಗಳ ವಿನಿಮಯಕ್ಕಾಗಿ ಭಾರತದಲ್ಲೆಲ್ಲಾ ಏಕ ರೂಪವಾದ ಕಾನೂನು ಇರಬೇಕಾದುದು ಅಪೇಕ್ಷಣೀಯವೆಂದು ಸದನವು ಪರಿಗಣಿಸುವುದರಿಂದ ಅಂಥ ಕಾನೂನು ವಿಷಯವು ಭಾರತ ಸಂವಿಧಾನ 7ನೆಯ ಅನುಸೂಚಿಯ 11ನೇ ಪಟ್ಟಿಯ 15ನೇ ಮತ್ತು 32ನೆಯ ನಮೂದುಗಳ ಮತ್ತು 111ನೇ ಪಟ್ಟಿಯ 26ನೇ ನಮೂದಿನಲ್ಲಿ ತಿಳಿಸಲಾದ ವಿಷಯಗಳಿಗೆ ಮುಖ್ಯವಾಗಿ ಸಂಬಂಧಪಡಬಹುದಾದ್ದರಿಂದ, ಭಾರತ ಸಂವಿಧಾನ 249 ಮತ್ತು 250 ಅನುಚ್ಛೇದಗಳಲ್ಲಿ ಉಪಬಂಧಿಸಲಾದುದನ್ನು ಹೊರತುಪಡಿಸಿ ಪೂರ್ವದ 11ನೇ ಪಟ್ಟಿಯ 15 ಮತ್ತು 32ನೇ ನಮೂದುಗಳಲ್ಲಿ ತಿಳಿಸಲಾದ ವಿಷಯಗಳ ಸಂಬಂಧದಲ್ಲಿ ರಾಜ್ಯಗಳಿಗಾಗಿ ಅಂಥ

ಕಾನೂನು ಮಾಡಲು ಸಂಸತ್ತಿಗೆ ಅಧಿಕಾರವಿಲ್ಲ. ಆದುದರಿಂದ ಸಂವಿಧಾನದ 252ನೇ ಅನುಚ್ಛೇದದ ಒಂದನೇ ಖಂಡದ ಅಡಿಯಲ್ಲಿನ ಅಧಿಕಾರಿಗಳ ಸಮರ್ಥನೆಯಿಂದ ಮತ್ತು, ಹರಿಯಾಣ, ಬಿಹಾರ, ಒರಿಸ್ಸಾ, ಹಿಮಾಚಲ ಪ್ರದೇಶ ಮತ್ತು ರಾಜಸ್ಥಾನ ರಾಜ್ಯಗಳ ವಿಧಾನ ಮಂಡಲಿಗಳ ಎಲ್ಲಾ ಸದನಗಳಿಂದ ಅಂಗೀಕರಿಸಲಾದ ಗೊತ್ತುವಳಿಗಳ ಅನುಸೂಚನೆಯಲ್ಲಿ ಸಂಸತ್ತು, ಭಾರತೀಯ ಪಶುವೈದ್ಯಕೀಯ ಪರಿಷತ್ತು, ವೈದ್ಯಕೀಯ ನಿಯಮ 1984ನ್ನು ಅಂಗೀಕರಿಸಿರುವುದರಿಂದ ಮೊದಲನೆಯದಾಗಿ ಭಾರತೀಯ ಪಶುವೈದ್ಯಕೀಯ ಪರಿಷತ್ತು ಅಧಿನಿಯಮ 1984...

ಅಧ್ಯಕ್ಷರು:- ನೀವು ಓದಿದ್ದೀರಿ ಎಂದು ನಾವು ತಿಳಿದುಕೊಳ್ಳುತ್ತೇವೆ. ನೀವು ಅಪೋಸ್ ಮಾಡುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ:- ಹೌದು, ಅಷ್ಟೇ ಅಲ್ಲ, ಏತಕ್ಕೋಸ್ಕರ ಎನ್ನುವುದನ್ನು ಹೇಳುತ್ತೇನೆ. ನನಗೆ ಅರ್ಥವಾಗುತ್ತಾ ಇಲ್ಲ, ಇಂಥ ಗಂಭೀರವಾದಂಥ ವಿಚಾರಗಳನ್ನು ಚರ್ಚೆ ಇಲ್ಲದೆ ಅದನ್ನು ಕಾನೂನಾಗಿ ಅಡಾಪ್ಟ್ ಮಾಡಿಕೊಳ್ಳಬೇಕೆಂದು ಹೇಳಿದರೆ, ನಮ್ಮ ಶಾಸನಸಭೆಯ ಅವಶ್ಯಕತೆಯೇ ಇರಲಾರದು.

ಶ್ರೀ ಸಿ. ಬೈರೇಗೌಡ:- ನಾವು ಕೋಳಿ, ಕುರಿ ವಿಚಾರ ಮಾತನಾಡುತ್ತಾ ಇದ್ದೇವೆ. ಏಕಾಂತಯ್ಯನವರು ನಮ್ಮನ್ನು ಇವೊತ್ತು ಕೋಳಿ ಕೂಗುವವರೆಗೂ ಬಿಡುವ ಹಾಗಿಲ್ಲ....

Mr.SPEAKER:- I am willing to listen to Mr.Ekanthaiah.

ಶ್ರೀ ಹೆಚ್. ಏಕಾಂತಯ್ಯ:- ಸಭಾಧ್ಯಕ್ಷರೇ, ಈ ಶಾಸನಾತ್ಮಕ ನಿರ್ಣಯವನ್ನು ಈ ಸಭೆಯ ಪರಿಶೀಲನೆಗೆ ಇಟ್ಟಿದ್ದಾರೆ, ಇದರ ಮುಖ್ಯ ಉದ್ದೇಶ 1984ನೇ ಇಂಡಿಯನ್ ವೆಟರ್‌ನರಿ ಕೌನ್ಸಿಲ್ ಆಕ್ಟ್ ಏನಿದೆ, ಅದನ್ನು ಈ ರಾಜ್ಯದಲ್ಲಿ ಅನ್ವಯ ಮಾಡಿಕೊಳ್ಳಬೇಕು ಮತ್ತು ಅದನ್ನು ಕಾನೂನಾಗಿ ಜಾರಿಗೆ ಮಾಡಿಕೊಳ್ಳಬೇಕೆಂಬ ಒಂದು ಉದ್ದೇಶದಿಂದ ಇಟ್ಟಿದ್ದಾರೆ. ಈ ಒಂದು ಶಾಸನಾತ್ಮಕ ನಿರ್ಣಯವನ್ನು ತರಬೇಕಾದರೆ, ಕೆಲವು ವಿಚಾರಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಮೊಟ್ಟಮೊದಲನೆಯದಾಗಿ ಪಶುವೈದ್ಯ ತರಬೇತಿ ಮತ್ತು ವೃತ್ತಿ ಮತ್ತು ಅದಕ್ಕೆ ಸಂಬಂಧಪಟ್ಟ ಪೂರಕವಾದ ಮತ್ತು ಅನುಸಂಗಿಕ ವಿಷಯಗಳ ವಿನಿಮಯಕ್ಕಾಗಿ ಭಾರತದಾದ್ಯಂತ ಏಕರೂಪವಾದ ಕಾನೂನು ಇರಬೇಕಾದುದು ಅಪೇಕ್ಷಣೀಯ ಎಂದು ಸದನವು ಪರಿಗಣಿಸುವುದರಿಂದ ಅಂಥ ಕಾನೂನಿನ ವಿಷಯ ಭಾರತದ ಸಂವಿಧಾನದ ಏಳನೆಯ ಅನುಸೂಚಿಯ 11ನೇ ಪಟ್ಟಿಯ 2ನೇ ಪಟ್ಟಿಯ 15ನೇ ಮತ್ತು 32ನೇ ನಮೂದುಗಳು. ತಮ್ಮ ಗಮನಕ್ಕೆ ಬಂದಿರುವ ಹಾಗೆ ಎರಡನೆಯ ಪಟ್ಟಿಯಲ್ಲಿ ಏನು ಸೂಚಿತವಾಗಿವೆ ಎಂದರೆ Under Article 246(1) it is defined. What this article says?

> "Notwithstanding anything in clauses (2) and (3), Parliament has exclusive power to make laws with respect to any of the matters enumerated in List I in the Seventh Schedule (in this Constitution referred to as the 'Union List')"

ಯೂನಿಯನ್ ಲಿಸ್ಟ್‌ನಲ್ಲಿ ಏನು ವಿಚಾರ ವಿನಿಮಯ ಮಾಡಿದ್ದಾರೆ, ಅದರ ಪ್ರಕಾರ ಕಾನೂನು ಮಾಡುವುದಕ್ಕೆ ಪಾರ್ಲಿಮೆಂಟ್‌ಗೆ ಅಧಿಕಾರ ಇದೆ.

MR.SPEAKER:- You are referring to constitution.

Article 246 (2) reads thus:

"Notwithstanding anything in clause (3), Parliament, and, subject to clause (1), the Legislature of any State also, have power to make laws with respect to any of the matters enumerated in List III in the Seventh Schedule,"

ಇದರ ಪ್ರಕಾರ ಪಾರ್ಲಿಮೆಂಟಿಗೂ ಅಧಿಕಾರ ಇದೆ. ಆದರೆ ಇವತ್ತು ಸಚಿವರು ಏನು ಶಾಸನಾತ್ಮಕ ನಿರ್ಣಯ ತಂದಿದ್ದಾರೆ ಅದರಲ್ಲಿ, ಕನ್‌ಕರೆಂಟ್ ಲಿಸ್ಟೆಂದು ಅಥವಾ ಲಿಸ್ಟ್ ನಂ.3 ಎಂದು ಕರೆಯುತ್ತೇವೆ, ಅದರಲ್ಲಿ ಈ ನಿರ್ಣಯದಲ್ಲಿ ವಿಚಾರ ಸೇರಿರುವುದು ಸರಿಯೇನು ಸ್ವಾಮಿ? ಪಾರ್ಲಿಮೆಂಟಿಗೆ ಯಾವುದಕ್ಕೆ ಅಧಿಕಾರ ಇದೆ? ಅಂಡರ್ ಆರ್ಟಿಕಲ್ 252(1) ಏನಿದೆ ಅದರ ಪ್ರಕಾರ ಪಾರ್ಲಿಮೆಂಟ್‌ಗೆ ಅಧಿಕಾರ ಇಲ್ಲ. ಅಂತಹ ಸಂದರ್ಭಗಳಲ್ಲಿ ಅಂದರೆ ಯಾವ ವಿಚಾರಗಳು ಸ್ಟೇಟ್‌ಲಿಸ್ಟ್‌ಗೆ ಸಂಬಂಧಪಟ್ಟಿವೆ ಅಂತಹ ವಿಚಾರಗಳಲ್ಲಿ ಪಾರ್ಲಿಮೆಂಟ್ ಕಾನೂನು ಮಾಡಬಹುದು ಅಂದರೆ ಯಾವ ಸಂದರ್ಭದಲ್ಲಿ ಮಾಡಬಹುದೆನ್ನುವ ಮಾತನ್ನೂ ಹೇಳಿದ್ದಾರೆ. ಅಂದರೆ ಕಾನೂನು ಮಾಡಲಿಕ್ಕೆ ಯಾವಾಗ ಅಧಿಕಾರ ಇದೆ ಎಂದರೆ ಕೇವಲ ಅಂತಹ ವಿಚಾರ ಸ್ಟೇಟ್ ಲಿಸ್ಟ್‌ಗೆ ಸಂಬಂಧಪಟ್ಟಾಗ ಮಾತ್ರ 252(1) ಪ್ರಕಾರ. ಆದರೆ ಇಲ್ಲಿ ಶಾಸನಾತ್ಮಕ ನಿರ್ಣಯ ತರುವಾಗ ಸರ್ಕಾರ ಹೇಳುತ್ತದೆ ಕನ್‌ಕರೆಂಟ್ ಲಿಸ್ಟ್‌ಯಲ್ಲಿರುವ ವಿಚಾರವೂ ಈ ನಿರ್ಣಯದಲ್ಲಿ ಸೇರಿದೆ ಎನ್ನುವ ಮಾತನ್ನು ಹೇಳುತ್ತಾರೆ, ಇದು ಸರಿಯೇ ಸ್ವಾಮಿ? ಕನ್‌ಕರೆಂಟ್ ಲಿಸ್ಟ್‌ಗೆ ಸೇರಿದ್ದರೆ ಎಷ್ಟೊಂದು ಡಿಫೆಕ್ಟೀವಾಗಿ ಇಲಾಖೆ ಮತ್ತು ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರೆ ಎಂಬುದನ್ನು ಮೊದಲಿಗೆ ತಮ್ಮ ಗಮನಕ್ಕೆ ತರಬಯಸುತ್ತೇನೆ. ಒಂದು ಕಡೆ ಹೇಳುತ್ತೀರಿ, ಪಾರ್ಲಿಮೆಂಟಿಗೆ ಯಾವ ಅಧಿಕಾರ ಇಲ್ಲ ಬೇರೆ ವಿಚಾರದಲ್ಲಿ ಅಂತಹ ಕಾನೂನು ಮಾಡಬೇಕಾದರೆ 252(1)ನಲ್ಲಿ ತರಬೇಕೆನ್ನುತ್ತೀರಿ ಮತ್ತೊಂದು ಕಡೆ ಆ ವಿಚಾರ ಕನ್‌ಕರೆಂಟ್ ಲಿಸ್ಟ್‌ಗೆ ಸಂಬಂಧಪಟ್ಟಿದೆ ಎಂದೂ ನಿಮ್ಮ ನಿರ್ಣಯದಲ್ಲಿ ಹೇಳುತ್ತೀರಿ. ಆ ಭಾಗವನ್ನು ಓದುತ್ತೇನೆ. ಭಾರತ ಸಂವಿಧಾನದ 249 ಮತ್ತು 250ನೇ ಅನುಚ್ಛೇದಗಳಲ್ಲಿ ಉಪಬಂಧಿತಲಾದುದನ್ನು ಹೊರತುಪಡಿಸಿ, ಎರಡನೇ ಪಟ್ಟಿಯ 15 ಮತ್ತು 32ನೇ ನಮೂದುಗಳಲ್ಲಿ ಎಂಬ ಮಾತು ಹೇಳುತ್ತಾರೆ. ಅದರ ಹಿಂದಿನ ಪ್ಯಾರದಲ್ಲಿ ಹೇಳುತ್ತಾರೆ 3ನೇ ಪಟ್ಟಿಯ 26ನೇ ನಮೂದಿನಲ್ಲಿ ತಿಳಿಸಿರುವ ಮುಖ್ಯ ವಿವರಗಳಿಗೆ ಸಂಬಂಧಪಡಬಹುದಾದ್ದರಿಂದ How it is relevant ಸ್ವಾಮಿ? ಈ ಶಾಸನಾತ್ಮಕ ನಿರ್ಣಯ ಮಾಡಬೇಕಾದರೆ ಅದು ರಾಜ್ಯದ ಪಟ್ಟಿಗೆ ಸಂಬಂಧಪಟ್ಟಂತಹ ವಿಚಾರವಾಗಿರಬೇಕು ಆದರೆ ಈ ನಿರ್ಣಯದಲ್ಲಿ ಅವರು ಪ್ರಸ್ತಾಪಿಸಿರುವುದು ಹೊಗಳಿರುವುದು ಮೂರನೆಯ ಪಟ್ಟಿಗೆ ಸಂಬಂಧಪಟ್ಟಿದ್ದರಿಂದ ಎಂಬ ಮಾತನ್ನು ಹೇಳುತ್ತಾರೆ. Is it not defective? Para-2 of the Statutory Resolution says:

"AND WHEREAS the subject matter of such a law is relatable mainly to matters enumerated in entries 15 and 32 of List II and entry 26 of List III in the Seventh Schedule of the Constitution of India,"

ಅಂದರೆ ಯಾವಾಗ ಸರ್ಕಾರದ ಅಭಿಪ್ರಾಯದಲ್ಲಿ ಕನ್‌ಕರೆಂಟ್ ಲಿಸ್ಟ್‌ನಲ್ಲಿರುವ ಎಂಟ್ರಿ ಸರಿ. 26ಕ್ಕೆ ಸಂಬಂಧಪಡುತ್ತದೆ. ಈ ವಿಷಯ ಎಂದು ಹೇಳಿದ ಮೇಲೆ ನಾನು ತಮಗೆ ಕೇಳುತ್ತಿದ್ದೇನೆ how the parliament is precluded from enacting this Act according to this? The very resolution is defective. ಮೊಟ್ಟಮೊದಲನೆಯದಾಗಿ ಇಂದು ಪ್ರಸ್ತಾಪ ಮಾಡಿರುವ ಈ ನಿರ್ಣಯ ರಾಜ್ಯಾಂಗಕ್ಕೆ ವಿರೋಧವಾಗಿದೆ, ಏತಕ್ಕಾಗಿ ವಿರೋಧವಾಗಿದೆ ಎನ್ನುವ ಮಾತನ್ನು ಈಗಲೇ ಹೇಳಿದೆ, ಒಂದು ಕಡೆ ಕನ್‌ಕರೆಂಟ್ ಲಿಸ್ಟ್‌ನಲ್ಲಿರುವ ಎಂಟ್ರಿ ನಂ.26ಕ್ಕೆ ಈ ವಿಷಯ ಸಂಬಂಧಪಟ್ಟಿದೆ ಎಂದು ಘೋಷಣೆ ಮಾಡುತ್ತ ಮತ್ತೊಂದು ಕಡೆ ಪಾರ್ಲಿಮೆಂಟಿಗೆ ಇದರ

ಬಗ್ಗೆ ಅಧಿಕಾರ ಇಲ್ಲ ಅಂತ ಹೇಳುವುದು ಕಾನೂನಿನ, ಸಂವಿಧಾನದ ವಿಧಿಗಳಿಗೆ ವಿರುದ್ಧ. Under Article 246 itself the parliament has every power to enact law with respect to any matter which is in the concurrent list also. Therefore, my first objection is, the resolution itself is defective. It is anti-constitutional, ಇದು ಮೊದಲು ಇದರ ಬಗ್ಗೆ ಮೊಟ್ಟ ಮೊದಲನೆಯದಾಗಿ ತಾವು ತಮ್ಮ ತೀರ್ಮಾನವನ್ನು ಚರ್ಚೆಯನ್ನು ಮುಂದುವರಿಸುವುದಕ್ಕೆ ಮೊದಲು ಕೊಡಬೇಕು ಎಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೇ, ಒಂಭತ್ತೂವರೆ ಆಗುತ್ತಿದೆ. ಮಾನ್ಯ ಏಕಾಂತಯ್ಯನವರು ಹೇಳುತ್ತಿರುವುದು ನಿಮಗೆ ಅರ್ಥವಾಗುತ್ತಿರುಬಹುದು. ನನ್ನ ತಲೆಗಂತೂ ಹೋಗುತ್ತಿಲ್ಲ. ಎಷ್ಟು ಜನ ಸದಸ್ಯರ ತಲೆಗೆ ಇದು ಹೋಗುತ್ತಿದೆ ಎಂದು ಗೊತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ಇದು ಸನ್ಮಾನ್ಯ ಎಲ್ಲಾ ಸದಸ್ಯರ ತಲೆಗೂ ಹೋಗಬೇಕು. ಮತ್ತು ಎಲ್ಲಾ ಸದಸ್ಯರು ಸಕ್ರೀಯವಾಗಿ ಕೇವಲ ಈ ಕಾರಣ ಎಂದು ಅಲ್ಲ. ಇದನ್ನು ಮುಂದೆ ಬರುವಂಥ ಎಲ್ಲಾ ಕಾಲದಲ್ಲೂ ಕ್ರಮವಾಗಿ ನಾವು ನೋಡಿದಾಗ ವಿಪರೀತವಾದಂಥ ಇಲ್ಲಿ ಕರ್ನಾಟಕ ರಾಜ್ಯದಲ್ಲಿರುವಂಥ ಡಾಕ್ಟರು ಯಾರು ಇದ್ದಾರೆ, ಅವರಿಗೂ ತೊಂದರೆ ಕೊಡುತ್ತದೆ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಇವತ್ತಿನ ದಿವಸ ನಾವು ಹೇಳುತ್ತೇವೆ, ಏನು ಮಿನಿಮಮ್ ವೆಟರ್‌ನರಿ ಕ್ವಾಲಿಫಿಕೇಷನ್ ಇದೆ, ಆ ಕ್ವಾಲಿಫಿಕೇಷನ್ ಇರುವಂಥ ಡಾಕ್ಟರು ಮಾತ್ರ ರಿಜಿಸ್ಟರ್ ಆಗಬೇಕು. ಆ ರಿಜಿಸ್ಟರ್ ಆದಂಥ ಡಾಕ್ಟರ್ ಮಾತ್ರ ಪ್ರಾಕ್ಟೀಸ್ ಮಾಡಬೇಕು, ಅದನ್ನು ರೆಗ್ಯುಲೇಟ್ ಮಾಡಬೇಕು ಎಂದು ಕಾನೂನನ್ನು ಮಾಡುವುದಾದರೆ ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಈ ಒಂದು ಮಿನಿಮಮ್ ಕ್ವಾಲಿಫಿಕೇಷನ್ ಇರತಕ್ಕಂಥ ಜನರು ಯಾರು ಇದ್ದಾರೆ, ಅವರ ಬಗ್ಗೆ ತಾವು ಏನು ಮಾಡಿದ್ದೀರಿ, ಮತ್ತು ಅಂಥ ಮಿನಿಮಮ್ ಕ್ವಾಲಿಫಿಕೇಷನ್ ಇಲ್ಲದಂಥ ಜನರ ಆಡಳಿತ ವ್ಯಾಪ್ತಿಗೆ ಸೇರಿರುವಂಥ ಆಸ್ಪತ್ರೆಗಳನ್ನು ತಾವು ಇವತ್ತಿನ ದಿವಸ ಮಂಜೂರು ಮಾಡಿದ್ದೀರಿ, ಅವುಗಳ ಗತಿಯೇನು ಸ್ವಾಮಿ? Livestock inspector ಇರಬಹುದು, ಅಥವಾ ಅಸಿಸ್ಟೆಂಟ್ ಇರಬಹುದು, ಅಂಥವರ ನೇತೃತ್ವದಲ್ಲಿ ಇರುವಂಥ ಆಸ್ಪತ್ರೆಗಳನ್ನು ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಮಂಜೂರು ಮಾಡಿದ್ದೇವೆ, ಅವುಗಳು ನಡೆಯುತ್ತಿವೆ. ಅವುಗಳನ್ನು ಮುಚ್ಚಿ ಹಾಕುತ್ತೀರಾ? ಅವುಗಳಿಗೆ ಪರ್ಯಾಯವಾದಂಥ ಯಾವ ವ್ಯವಸ್ಥೆಯನ್ನು ಸರ್ಕಾರ ಮಾಡಿದೆಯೇ ಮತ್ತು ಮಾಡಲಿಕ್ಕೆ ತಯಾರಾಗಿದೆಯೇ ಎನ್ನುವ ಮಾತನ್ನು ನಾನು ಕೇಳಬಯಸುತ್ತೇನೆ. ಇದು ಕೇವಲ ರಿಜಿಸ್ಟ್ರೇಷನ್‌ಗೆ ಸಂಬಂಧಪಡುವುದಿಲ್ಲ ಸನ್ಮಾನ್ಯ ಅಧ್ಯಕ್ಷರೇ, ಅದಕ್ಕಿಂತ ಮುಂದೆ ಹೋಗುತ್ತದೆ, it regulates the practice of these doctors. ಅದಕ್ಕೆ ಮಿನಿಮಮ್ ಕ್ವಾಲಿಫಿಕೇಷನ್ ಹೇಳುತ್ತೀರಿ. ಆದಕ್ಕೆ ಅನುಬಂಧದಲ್ಲಿ ತಾವು ಯಾವುದು ಕ್ವಾಲಿಫಿಕೇಷನ್ ಎನ್ನುವ ಮಾತನ್ನು ಹೇಳಿದ್ದೀರಿ, ನಾನು ಇನ್ನೊಂದು ಪ್ರಸ್ತಾಪವನ್ನು ಮಾಡುತ್ತೇನೆ. ಮೈಸೂರು ಯೂನಿವರ್ಸಿಟಿಯಲ್ಲಿ ಬಿ.ವಿ.ಎಸ್.ಸಿ. ಡಿಗ್ರಿ ಇಲ್ಲ. ಇದರಲ್ಲಿ ಇನ್ನೂ ಕರ್ನಾಟಕ ರಾಜ್ಯದಲ್ಲಿ ಜಿ.ಕೆ.ವಿ.ಕೆ.ಯಲ್ಲೂ ಬಂದಿಲ್ಲ. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲೂ ಬಿ.ವಿ.ಎಸ್.ಸಿ. ಡಿಗ್ರಿ ಬಂದಿಲ್ಲ. ಆದರೆ ಸನ್ಮಾನ್ಯ ಸರ್ಕಾರದವರು ಇವತ್ತಿನ ದಿವಸ ನನಗೆ ಪ್ರತಿಯನ್ನು ಒದಗಿಸಿದ್ದಾರೆ.

MR.SPEAKER:- By the University of Agricultural Sciences.

ಶ್ರೀ ಹೆಚ್. ಏಕಾಂತಯ್ಯ:- ಎಲ್ಲಿಗೆ ಸ್ವಾಮಿ? How negligent they are. That is why I want to read it.

MR.SPEAKER:- I also saw that.

ಶ್ರೀ ಹೆಚ್. ಏಕಾಂತಯ್ಯ:- ಸ್ವಾಮಿ, ಐಟಂ ನಂಬರ್ 24 ಆಫ್ ದಿ ಫಸ್ಟ್ ಷೆಡ್ಯೂಲ್

ತಾವು ನೋಡಿ. ಯೂನಿವರ್ಸಿಟಿ ಆಫ್ ಮೈಸೂರು, ಬ್ಯಾಚುಲರ್ ಆಫ್ ವೆಟರ್‌ನರಿ ಸೈನ್ಸ್ (ಬಿ.ವಿ.ಎಸ್.ಸಿ) ಇದೇ ಏನು ಸ್ವಾಮಿ, ಕಾನೂನನ್ನು ಜಾರಿಗೆ ತರುವುದು. ಸೀರಿಯಲ್ ನಂಬರ್ 24 ಆಫ್ ದಿ ಫಸ್ಟ್ ಷೆಡ್ಯೂಲ್. The department or the government doesn't take it seriously. How could the Mysore University award B.V.Sc. degree where it doesn't exist now. ಇವತ್ತಿನ ದಿವಸ ಬಿ.ವಿ.ಎಸ್.ಸಿ.ಯನ್ನು ಮೈಸೂರು ಯೂನಿವರ್ಸಿಟಿಯಲ್ಲಿ ಕೊಡುತ್ತಾರೆಯೇ? ನಿಮ್ಮಲ್ಲಿ ಕಾಲೇಜು ಇದೆಯೇ? ಇವೆಲ್ಲಾ,

SRI M.VEERAPPA MOILY:- I am sorry, this is a different one. Karnataka Veterinary Practitioners Act 1963 is a State Act. You are going somewhere else.

ಶ್ರೀ ಹೆಚ್. ಏಕಾಂತಯ್ಯ:- ನಾನು ಇನ್ನೂ ಪ್ರಸ್ತಾಪ ಮಾಡಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ:- ದಯಮಾಡಿ ಕ್ಷಮಿಸಿ. ಯಾವ ದಿಕ್ಕಿಗೂ ಹೋಗಬೇಡಿ. ದಯಮಾಡಿ ಕ್ಷಮಿಸಿ. ಏಕೆಂದರೆ I was also surprised whether he was quoting the Act connected with the resolution. This act is not connected with the resolution. I don't know which Act he is reading. This is the Act passed by the Legislature. This is Karnataka Veterinary Practitioners Act. The resolution is not related to that. Resolution is something else. What the resolution referes to is the Central Act. We are concerned with the resolution. ಸನ್ಮಾನ್ಯ ಸದಸ್ಯರು ಏನು ನಿರ್ಣಯ ಇದೆ, ಅದರ ಬಗ್ಗೆ ಚರ್ಚೆ ಮಾಡಲಿ. ಇದು ಕರ್ನಾಟಕ ವೆಟರ್‌ನರಿ ಆಕ್ಟ್.... After all we have to adopt this resolution. If there is any incongruity with reference to the Central Act and the State Act, the Central Act will prevail. ಆದ್ದರಿಂದ ಇದರ ಬಗ್ಗೆ ನಾವು ಚರ್ಚೆ ಮಾಡಬೇಕಾದಂತಹ ಅವಶ್ಯಕತೆ ಇಲ್ಲ. ಇದರಲ್ಲಿ ಜನರಲ್ ಕ್ಲಾಸಸ್ ಮತ್ತು ರಾಜ್ಯಾಂಗದ ಪ್ರಕಾರ ಸ್ಟೇಟ್‌ಆಕ್ಟನ್ನು, ರೆಸಲ್ಯೂಷನ್ ಅನ್ನು ಹೊಂದಾಣಿಕೆ ಮಾಡಿ ಚರ್ಚೆ ಮಾಡಿದರೆ ನಾವು ಬೇರೆ ದಿಕ್ಕಿಗೆ ಹೋದ ಹಾಗೆ ಆಗುತ್ತದೆ, ಅದು ಅಗತ್ಯವೇ ಇಲ್ಲ. If suppose we want tomorrow and we adopt this ಸೆಂಟ್ರಲ್‌ಆಕ್ಟನ್ನು ಅಡಾಪ್ಟ್ ಮಾಡಿದ ಹಾಗೆ ಆಯಿತು. The Karnataka Veterinary Practitioners Act will be amended in accordance with the Central Act. First of all, we must adopt this so that the Central Act will come into effect. Once the Central Act comes into effect and if there is any incongruity, we will have to amend it afterwards in conformity with the Central Act.

ಶ್ರೀ ಹೆಚ್. ಏಕಾಂತಯ್ಯ:- ನಾನು ಪ್ರಥಮ ಬಾರಿಗೆ ಮಾನ್ಯ ಮುಖ್ಯಮಂತ್ರಿಗಳು ಈ ರೀತಿ ಮಾತನಾಡುವುದನ್ನು ನೋಡಿದ್ದೇನೆ. ನಾನು ಖಂಡಿತವಾಗಿಯೂ ಸಹ ರಾಜ್ಯದ ಕಾನೂನಿಗೆ ರೆಫರ್ ಮಾಡಿಲ್ಲ. ಇವತ್ತು ಏಕೋ ಮಾನ್ಯ ಮುಖ್ಯಮಂತ್ರಿಗಳು He is on a different track. For the first time, ನಾನು ಕಳೆದ 6-7 ವರ್ಷಗಳಿಂದ 1985ನೇ ಇಸವಿಯಿಂದ ನೋಡುತ್ತಿದ್ದೇನೆ. ಅವರು ಪ್ರಥಮ ಬಾರಿಗೆ ಏಕೋ ದಾರಿ ತಪ್ಪುತ್ತಿದ್ದಾರೆ. I am sorry ಈ ಮಾತನ್ನು ಬಹಳ ನೋವಿನಿಂದ ಹೇಳುತ್ತಿದ್ದೇನೆ. ಅವರು ಎಂದೂ ಈ ರೀತಿ ಮಾತನಾಡಿದವರು ಅಲ್ಲ. ನಾನು ಪದೇ ಪದೇ ಹೇಳುತ್ತಿದ್ದೇನೆ. ನಾನು ಇಷ್ಟೆಲ್ಲಾ ಮಾತನಾಡಬೇಕಾದರೆ ಪುಸ್ತಕ ನೋಡದೆ ಬರುವುದಕ್ಕಾಗುತ್ತದೆಯೇ? ತಾವು ಸಮಾಧಾನದಿಂದ ಇದ್ದರೆ, ನಿಮ್ಮ ತೊಂದರೆ ಕಡಿಮೆ ಆಗುತ್ತದೆ. 1984ನೇ Indian Veterinary Council Act of 1984 in Section 2(e) and Section 15. ಏಕೆಂದರೆ ಮಾನ್ಯ ಬೈರೇಗೌಡರು ಹಾಗೂ ಮಾನ್ಯ ವಾಟಾಳ್ ನಾಗರಾಜ್ ಅವರು

ಹೇಳಿದ ಹಾಗೆ ಈ ರೀತಿ ಚರ್ಚೆ ಮಾಡಿದರೆ ಬೆಳಿಗ್ಗೆ ಆಗುತ್ತದೆ ಕೋಳಿ ಕೂಗುತ್ತದೆ. Sec.15 of the said Act reads thus:

"The Veterinary qualification granted by any Veterinary Institution in India which are included in the Ist Schedule shall be recognised Veterinary Qualification for the purpose of this Act."

ಅಧ್ಯಕ್ಷರು:- ಯಾವ ಸೆಕ್ಷನ್ ತಾವು ಹೇಳುತ್ತಿರುವುದು.

ಶ್ರೀ ಹೆಚ್. ಏಕಾಂತಯ್ಯ:- ಸೆಕ್ಷನ್ 15,
"The Veterinary qualification granted by any Veterinary Institution in India which are included in the Ist Schedule shall be recognised Veterinary Qualification for the purpose of this Act."

ಇವತ್ತಿನ ದಿವಸ ನಾನು ಹೇಳುತ್ತಾ ಇದ್ದೇನೆ, ಕರ್ನಾಟಕ ರಾಜ್ಯದಲ್ಲಿ ಇವರು ಹೇಳುತ್ತಾರೆ, ಆದರಿಂದ ಫಸ್ಟ್ ಷೆಡ್ಯೂಲ್ ತಾವು ತೆಗೆದು ನೋಡಿ. ಫಸ್ಟ್ ಷೆಡ್ಯೂಲ್, ಐಟಂ ನಂಬರ್ 24 ನೋಡಿ.

University of Mysore - Bachelor of Veterinary Science"

ಈಗ ಕೇಳುತ್ತಾ ಇದ್ದೇನೆ, ಇದು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿದೆಯೇ? ಅದು ಹಾಗೆ ಆಗಿಲ್ಲ. ನಾನು ತಮ್ಮ ಗಮನಕ್ಕೆ ತರುವುದು ಏನು ಎಂದರೆ ಇದು ಅಮೆಂಡ್ ಆಗಿದೆ. ಅಮೆಂಡ್ ಆಗದೇ ಇರುವುದಕ್ಕೆ ಸಾಧ್ಯವೇ ಇಲ್ಲ. ನಮ್ಮ ಇಲಾಖೆಯವರು ಯಾವ ಇಂಪ್ರೆಷನ್‌ನಲ್ಲಿ ಇದ್ದಾರೆ ಎಂದರೆ, ಕರ್ನಾಟಕದಲ್ಲಿ ಏನು ಎರಡು ಬಿ.ವಿ.ಎಸ್. ಡಿಗ್ರಿಗಳು ಬಂದಿವೆ; ಒಂದು ಜಿ.ಕೆ.ವಿ.ಕೆ. ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿದ್ದುದು, ಮತ್ತೊಂದು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸಂಬಂಧಪಟ್ಟಿದ್ದುದು ಎಂಬ ಮಾತನ್ನು ಹೇಳಬೇಕಾಗಿತ್ತು. ಕನಿಷ್ಟ ಪಕ್ಷ ಅದನ್ನೂ ಹೇಳುವುದಿಲ್ಲ. ಇದನ್ನು ಮಾಡಬೇಕಾಗಿತ್ತು. ಇದನ್ನು ಅಮೆಂಡ್ ಮಾಡಿರುವುದರಿಂದ, ಇಷ್ಟೊಂದು ಅವಸರದಲ್ಲಿ ತಮ್ಮ ಕಾನೂನನ್ನು ನಾವು ಚರ್ಚೆ ಮಾಡಬೇಕು. ಆಗಬಹುದೇ ಸ್ವಾಮಿ. ಯಾವುದು ಕರ್ನಾಟಕದಲ್ಲಿ ಅಸ್ತಿತ್ವದಲ್ಲಿ ಇಲ್ಲ, ಕರ್ನಾಟಕದಲ್ಲಿ ಅಂತಹ ಬಿ.ವಿ.ಎಸ್.ಸಿ.ಅನ್ನು ರೆಕಾಗ್ನೈಸ್ ಮಾಡುವುದಕ್ಕೆ ನಾವು ಕಾನೂನನ್ನು ತರಬಹುದೇ? ಆದ್ದರಿಂದ ನನ್ನ ಹಠ ಏನೂ ಇಲ್ಲ, ಇವತ್ತು ಮಾಡಬಾರದು ಎಂದಲ್ಲ. ನಾನು ಏತಕ್ಕೋಸ್ಕರ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸವಿಸ್ತಾರವಾಗಿ ಚರ್ಚೆ ಮಾಡಬೇಕು ಎನ್ನುವ ಎರಡು ಕಾರಣದಿಂದ. ಒಂದು ಡಿಫೆಕ್ಟೀವ್ ರೆಸಲ್ಯೂಷನ್. ಅದನ್ನು ಸರ್ಕಾರದವರು ತಿದ್ದುಪಡಿ ಮಾಡಬೇಕು ಮತ್ತು ಪ್ರತ್ಯೇಕವಾದಂಥ ರೆಸಲ್ಯೂಷನ್ ಅನ್ನು ತರಬೇಕಾದುದು ಅತ್ಯಂತ ಅವಶ್ಯಕ, ಸಂವಿಧಾನಕ್ಕೆ ವಿರೋಧ ಆಗಿರುವುದರಿಂದ ಮೊದಲನೆಯ ಆಕ್ಷೇಪ. ಎರಡನೆಯದಾಗಿ ನಾನು ಈಗಾಗಲೇ ಹೇಳಿದಂತೆ ಅನೇಕ ವಿಧಿಗಳು ಏನಿವೆ, ಸೆಕ್ಷನ್ಸ್ ಏನಿವೆ ಇವು ಮಹತ್ತರವಾದಂತಹ ಪರಿಣಾಮವನ್ನು ಕರ್ನಾಟಕ ರಾಜ್ಯದ ಜಾನುವಾರುಗಳ ಆರೋಗ್ಯದ ಮೇಲೆ ಉಂಟುಮಾಡುತ್ತದೆ. ಬರೀ ಮನುಷ್ಯರಿಗೆ ಅಲ್ಲ, ಕರ್ನಾಟಕ ರಾಜ್ಯದಲ್ಲಿರುವ ಎರಡೂವರೆ ಕೋಟಿ ದನಗಳು ಏನಿವೆ ಅವುಗಳ ಸಂಪತ್ತನ್ನು ನಾವು ಉಳಿಸಿಕೊಳ್ಳಬೇಕಾಗಿದೆ. ಅದಕ್ಕೆ ಕೊಡಬೇಕಾದಂತಹ ಚಿಕಿತ್ಸೆಗಳಿಗೆ ಏನು ಡಾಕ್ಟರುಗಳು ಇದ್ದಾರೆ ಅವರನ್ನು ರೆಕಗ್ನೈಸ್ ಮಾಡಬೇಕೇ ಬಿಡಬೇಕೇ ಅವರ ಬಗ್ಗೆ ಯಾವುದಾದರೂ ಬದಲಿ ವ್ಯವಸ್ಥೆಯನ್ನು ಮಾಡಬೇಕೇ ಬಿಡಬೇಕೇ ಎನ್ನುವುದರ ಬಗ್ಗೆ ಚರ್ಚೆ ಮಾಡುವುದು ಅವಶ್ಯಕತೆ ಇದೆ ಎನ್ನುವುದು ನನ್ನ ಭಾವನೆಯಾಗಿದೆ. ಆ ದೃಷ್ಟಿಯಿಂದ ಇದನ್ನು ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳುವುದಕ್ಕೆ ಸರ್ಕಾರ ಖಂಡಿತವಾಗಿಯೂ ಮನಸ್ಸು ಮಾಡಬೇಕು; ಯಾವುದೇ ಪ್ರತಿಷ್ಠೆಯ ಮೇಲೆ ಸರ್ಕಾರ ನಿಲ್ಲಿಸಬಾರದೆಂದು ನಾನು ಸವಿನಯದಿಂದ ಸರ್ಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ:- ಇದು ಸೆಂಟ್ರಲ್ ಆಕ್ಟ್. ಸೆಂಟ್ರಲ್ ಆಕ್ಟ್ ಅನ್ನು ಅಡಾಪ್ಟ್ ಮಾಡತಕ್ಕ ಪ್ರಯತ್ನ ನಾವು ವಿಧಾನ ಸಭೆಯಲ್ಲಿ ಮಾಡುತ್ತಿದ್ದೇವೆ. First Schedule-University of Mysore. Ofcourse, they know, the Parliament knew only about University of Mysore. That is an amendment which we can always write to them. It is for the Parliament to amend and not for us. It is not our fault. We can set-right it after we adopt this also. Immediately that is amended, it comes into effect. For that lapse, we need not withhold the adoption of this Resolution. It takes its own time. Regarding amendment, we will always take it up with the Parliament. There is no point in withholding this Indian Veterinary Council Act of 1984. We will have to adopt and we would like that it should be adopted. The question is, whether we should adopt it or not. That is a limited question before us. Whether there are any mistakes, incongruities or other things, which is a matter, our Government will always take it up with the Govt. of India. Any such mistakes which are in conflict, I assure that we will take it up with the Government of India. For that I need not come back to this Assembly again. Subject to that it can be adopted. That is the only point of dispute. Whether we should adopt this Act or not is the main question before us. Any mistakes or correction, our Government will take it up with the Government of India and get the correction.

ಶ್ರೀ ಜೆ.ಸಿ. ಮಾಧುಸ್ವಾಮಿ:- ರೂರಲ್ ವೆಟರ್ನರಿ ಆಸ್ಪತ್ರೆಗಳು ಏನಿದೆ ಅಲ್ಲಿ ಇನ್ಸ್‌ಪೆಕ್ಟರ್ಸ್ ಪ್ರಾಕ್ಟೀಸ್ ಮಾಡುತ್ತಿದ್ದಾರೆ. ನೀವು ಇದನ್ನು ಅಡಾಪ್ಟ್ ಮಾಡಿದ ತಕ್ಷಣ ಪ್ರಾಕ್ಟೀಸ್ ಮಾಡುವುದಕ್ಕಾಗುವುದಿಲ್ಲ. ನೀವು ಅವರಿಗೆಲ್ಲಾ ವೆಟರ್‌ನರಿ ಡಾಕ್ಟರ್ ಪೋಸ್ಟಿಂಗ್ ಕೊಡುತ್ತೀರಾ? ಆ ಕೆಡರ್‌ನಲ್ಲಿ ಪೋಸ್ಟನ್ನು ಕ್ರಿಯೇಟ್ ಮಾಡಿದ್ದೀರಾ ಎನ್ನುವುದನ್ನು ಇಲ್ಲಿ ಹೇಳಬೇಕಾಗುತ್ತದೆ. ಎಂ.ಬಿ.ಬಿ.ಎಸ್. ಓದಿರುವುದು ಗೌರ್ನಮೆಂಟ್ ಡಾಕ್ಟರ್ ಆಗಿ ಬರುವುದಿಲ್ಲ. ಆರ್.ಎಂ.ಪಿ ಇತ್ತು, ಎಲ್.ಎಂ.ಪಿ ಇತ್ತು, ಮೆಡಿಕಲ್ ಕೌನ್ಸಿಲ್ ಆಕ್ಟ್ ಆದಮೇಲೆ ಹೊರಟುಹೋಯಿತು. ಇದು ಹಾಗೆ ಆಗಿದೆ. The major Veterinarians working in the field are Live Stock Inspectors and not the Veterinary Doctors. ಎಲ್ಲಾ ತಾಲ್ಲೂಕಿನಲ್ಲಿ 5-6 ಜನ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್ಸ್ ಕೆಲಸ ಮಾಡುತ್ತಿರುವವರ ಭವಿಷ್ಯ ಏನು? ಅಲ್ಲಿಗೆ ಎಷ್ಟು ಜನ ಪೋಸ್ಟಿಂಗ್ ಮಾಡಲಿಕ್ಕೆ ನಿಮ್ಮ ಸೂಚನೆ ಏನು? ನಾವು ಆಕ್ಟನ್ನು ಅಡಾಪ್ಟ್ ಮಾಡುತ್ತೇವೆಂದರೆ.....

ಶ್ರೀ ಹೆಚ್. ಏಕಾಂತಯ್ಯ:- ಅದರ ಬಗ್ಗೆ ಏನೂ ವಿರೋಧ ಇಲ್ಲ.

SRI M.VEERAPPA MOILY:- That has been provided in the Act. Please go through Section 15(2) which reads thus:

> "Any Veterinary Institution in India which grants a Veterinary Qualification not included in the Ist Schedule may apply to the Central Government to have such qualification recognised and Central Government after consulting the Council may by Notification in the Official Gazette, amend the First Schedule so as to include such qualification therein. Any such Notification may also direct that an

entry shall be made in the last column of the First Schedule against such Veterinary Qualification declaring that it shall be recognised Veterinary Qualification only when granted after the specified date."

Here, there is a mention of 'any qualification'. There is Agriculture Univeristy. Dharwad University is there. Suppose in the wisdom of the State Government, any other qualification, if we feel that should also be recognised, the State Govt. will write to the Central Govt. and the Central Govt. has power to notify it. We can always supplement it. However, for that sake you need not withhold the adoption of this Resolution.

9.40 P.M.

Section 15(2) is very clear which will take care of problems narrated by Sri Ekanthaiah and Sri Madhuswamy. In our wisdom if we would like to add some more institutions to be included for the recognition under Section 15(2), we can always do it. There is no problem. Suppose we don't do it, then the Karnataka Veterinary Doctors will be kept away from National main stream of this particular institution which I do not want. This is a demand of our Veterinary Doctors. This is the demand of Veterinary Services. Karnataka should not be deprived of this kind of an opportunity. Why should we do it? Now, the question before us is, whether we should adopt this Resolution or not to get a National recognition. Suppose if we feel in our wisdom or if the House feels that it is not necessary to get a National recognition of our Services, that is a different matter. But it is not the case with Mr.Ekanthaiah. He is more particular because we have included only the University of Mysore which does not grant any Degree. Afterall he is not questioning me but he is questioning the Parliament for which the Parliament has to give an answer. My question is, whether we would like to have National recognition or not. If the entire House feels that we don't want to get such a National recognition - that is a different matter. I feel that in the best interest of our own State, in the best interest of our own Graduates, they must have this kind of National recognition. ಸನ್ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಬಹಳ ಸ್ಪಷ್ಟವಾಗಿದೆ. ಇದರ ಮೇಲೆ ಚರ್ಚೆಯಾಗುವುದಕ್ಕೆ ನನ್ನದೇನೂ ಅಡ್ಡಿ ಇಲ್ಲ. Whether such deliberations are in the best interest of the Veterinary Education or not, If that requires a debate, I don't mind. But, I think, we have already been deprived for so many years of such a National recognition. Do you want another one or two months to deprive that kind of opportunity for our Doctors ನಮ್ಮ ಕರ್ನಾಟಕದ ಡಾಕ್ಟರುಗಳನ್ನು ಕರ್ನಾಟಕದ ದ್ವೀಪದಲ್ಲಿಯೇ ಇರಿಸಿದರೆ ಆ ಶಂಕೆ ಬೇರೆ.

ಶ್ರೀ ಹೆಚ್. ಏಕಾಂತಯ್ಯ:- ನಮ್ಮ ವಾದದ ಸರಣಿ ಬೇರೆ ರೀತಿಯದಾಗಿದೆ.

SRI M.VEERAPPA MOILY:- I am sorry. Again you are repeating. It is my view. I am entitled to have my view. You can have your own view. But

don't try to say that ನಾವು ಹೇಳುವಂಥಾದ್ದು ತಪ್ಪು, ತಾವು ಹೇಳುವಂಥಾದ್ದು ಸರಿ ಎಂದು, This is not a correct argument. I don't mind if Ekanthaiah is given time upto 12 O'Clock or any amount of time. ನಾನು ಅಡ್ಡಿ ಬರುವುದಿಲ್ಲ. ಈ ಎರಡು ಸದನಕ್ಕೆ ಬಿಟ್ಟಿದ್ದು, ಆದರೆ, ಸನ್ಮಾನ್ಯ ಸದಸ್ಯರು ವಾದ ಮಾಡಬಹುದು, ನಾವು ವಾದ ಮಾಡಬಾರದು, ನಾವು ಮಾಡಿದ ವಾದವೆಲ್ಲಾ ದಾರಿ ತಪ್ಪಿದ ವಾದವೆಂದು, ಏಕಾಂತಯ್ಯನವರು ಮಾಡಿದ ವಾದ ಸರಿಯಾದ ವಾದ ಅಂದರೆ, That argument ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಮಾತನಾಡುವುದು ತಮಗೆ ಬಿಟ್ಟದ್ದು. I am not arguing with you. I am on my legs. ನಾನು ಹೇಳುವುದಿಷ್ಟೆ. ನಮ್ಮದೇನೂ ಅಡಿಯಿಲ್ಲ. I am placing these facts. It is for the people to judge, whether I am correct or not. Whether you are correct, it is for the people to judge. Afterall it is for the profession to judge. Afterall these are professional people waiting for National recognition. If the House thinks that it is not necessary for the present. It is for the House. I am not coming in the way.

ಶ್ರೀ ಸಿ. ಬೈರೇಗೌಡ:- ಈ ನಿರ್ಣಯವನ್ನು ಅಡಾಪ್ಟ್ ಮಾಡುವುದಕ್ಕೆ ವಿರೋಧವಿಲ್ಲ. ಆದರೆ, ಸಮಸ್ಯೆಗಳ ಬಗ್ಗೆ ಮಾತ್ರ....

ಶ್ರೀ ಕೆ.ಹೆಚ್. ಹನುಮೇಗೌಡ:- ಸನ್ಮಾನ್ಯ ಅಧ್ಯಕ್ಷರೆ, ನಾವು ಬೆಳಿಗ್ಗೆ ತಿಂಡಿ ತಿಂದು ಬಂದಿದ್ದು, ಮಧ್ಯಾಹ್ನ ಊಟ ಕೂಡ ಮಾಡಿಲ್ಲ. ಇಲ್ಲಿ ಸಕ್ಕರೆ ಖಾಯಿಲೆ, ಬಿ.ಪಿ. ಖಾಯಿಲೆ ಇರುವ ಅನೇಕ ಸದಸ್ಯರುಗಳಿದ್ದಾರೆ. ನಾವುಗಳೆಲ್ಲರೂ ಹೋಟೆಲ್‌ನಲ್ಲಿ ಊಟ ಮಾಡುವವರು. ಈಗ ಹೋಟೆಲ್‌ಗಳೆಲ್ಲಾ ಬಾಗಿಲು ಮುಚ್ಚಿವೆ. ಅವರು 3-4 ಜನರು ಊಟ ಮಾಡಿಕೊಂಡು ಬಂದು ಇಲ್ಲಿ ಪಜೀತಿ ಎಬ್ಬಿಸುತ್ತಿದ್ದಾರಲ್ಲ ನಮ್ಮ ಗತಿ ಏನು?

ಶ್ರೀ ಜೆ.ಸಿ. ಮಾಧುಸ್ವಾಮಿ:- ನಾವು ಕೂಡ ಹನುಮೇಗೌಡರ ಜೊತೆಯಲ್ಲಿ ಕುಳಿತಿದ್ದೇವೆ. ಆದರೆ, ಒಂದೇ ಒಂದು ಮಾತು....

ಶ್ರೀ ಕೆ.ಹೆಚ್. ಹನುಮೇಗೌಡ:- ಈಗ ಹೋಟೆಲ್‌ಗಳೆಲ್ಲಾ ಬಾಗಿಲು ಮುಚ್ಚಿರುವುದರಿಂದ, ನಾವು ಊಟಕ್ಕೆ ಏನು ಮಾಡುವುದು?

ಅಧ್ಯಕ್ಷರು:- ನಮ್ಮ ಮನೆಗೆ ಬನ್ನಿ ಊಟಕ್ಕೆ ಹೋಗೋಣ.

ಶ್ರೀ ಕೆ.ಹೆಚ್ ಹನುಮೇಗೌಡ:- ಉಳಿದವರು?

ಅಧ್ಯಕ್ಷರು:- ಎಲ್ಲರೂ ಬನ್ನಿ.

ಶ್ರೀ ಕೆ.ಹೆಚ್. ಹನುಮೇಗೌಡ:- ನಮ್ಮ ಆರೋಗ್ಯ ಚೆನ್ನಾಗಿದ್ದರೆ 4 ಗಂಟೆ, 10 ಗಂಟೆ ಇಲ್ಲವೆ ದಿನಗಟ್ಟಲೆ ಚರ್ಚೆ ಮಾಡಬಹುದು. ಆದರೆ, ಈ ರೀತಿ ಚರ್ಚೆ ಮಾಡುವುದು ಅಷ್ಟು ಸೂಕ್ತವಲ್ಲವೆಂದು ಅನ್ನಿಸುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಸದನವನ್ನು ಮುಂದೂಡಲಿ ಇಲ್ಲವೆ ಅವರೂ ಒಪ್ಪಿಕೊಂಡು ಸುಮ್ಮನಾಗಲಿ. ಏಕೆಂದರೆ, ಹೇಗಿದ್ದರೂ ನಾವು ಕೈ ಎತ್ತಿದರೆ ಅವರ ಅಭಿಪ್ರಾಯ ಬಿದ್ದುಹೋಗುತ್ತದೆ. ಏಕೆ ಹೀಗೆ ಅವರು ಇಷ್ಟೊಂದು ತಲೆ ಚಚ್ಚಿಕೊಳ್ಳುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್:- ಅದಕ್ಕೆ ನಮ್ಮ ವಿರೋಧವಿಲ್ಲ. ನಾವು ಇಲ್ಲಿ ಮಸೂದೆ ಪಾಸ್ ಮಾಡುವುದರಿಂದ ಆಗತಕ್ಕಂಥ ಪರಿಣಾಮಗಳು, ನಮ್ಮ ರಾಜ್ಯದಲ್ಲಿರತಕ್ಕಂಥ ವ್ಯವಸ್ಥೆ, ಎಸ್‌ಎಸ್‌ಎಲ್‌ಸಿ ಪಾಸಾಗಿರತಕ್ಕಂಥವರು ವೆಟರ್ನರಿ ಇನ್ಸ್‌ಪೆಕ್ಟರ್ ಇದ್ದಾರೆ. ಅವರು ಪ್ರಾಕ್ಟಿಸ್ ಮಾಡುತ್ತಿದ್ದಾರೆ, ತಾಲ್ಲೂಕಿಗೆ ಒಬ್ಬೊಬ್ಬರು ಬಿವಿಎಸ್‌ನವರು ಇದ್ದಾರೆ. ಇದರ ಪರಿಣಾಮ......

SRI BLASIUS M. D'SOUZA:- Mr.Speaker Sir, the apprehension of the Member is that the Registered Practitioners cannot practice after the adoption of this Act. In the Medical Act, we have already allowed the registered Practitioners for Medicine also to practice. In the same way, there may be a registration after this. In the Schedule-I, it is said, Punjab Veterinary College, they have called graduation certificates. They have also said, Licensed Veterinary Practitioners. There is no fear. Those people will also be allowed to practice.

MR.SPEAKER:- They can all be provided for.

ಶ್ರೀ ಹೆಚ್. ಏಕಾಂತಯ್ಯ:- ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒಂದು ಮಾತನ್ನು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಾನು ಹೇಳಿದಂಥ ಮಾತಿನಲ್ಲಿ 'ಅವರ ವಾದ ತಪ್ಪು' ಎನ್ನುವ ಮಾತನ್ನು ಹೇಳಲಿಲ್ಲ. ಆ ರೀತಿ ಅವರೇನಾದರೂ ತಿಳಿದುಕೊಂಡಿದ್ದರೆ ಅದು ನಿಜವಾಗಿಯೂ ಸರಿಯಲ್ಲವೆಂಬ ಮಾತನ್ನು ಹೇಳುತ್ತೇನೆ. ನಾವು ಅವರ ಬಗ್ಗೆ ಯಾವುದೇ ದುರುದ್ದೇಶವಿಟ್ಟುಕೊಂಡು ಆಡಿದ ಮಾತಲ್ಲ. ಅದನ್ನು ಇಷ್ಟೊಂದು ತೀವ್ರವಾಗಿ ಪರಿಗಣಿಸಬೇಕಾದಂಥ ಅವಶ್ಯಕತೆಯೂ ಇಲ್ಲ. ಈ ದೇಶದಲ್ಲಿರುವವರೆಲ್ಲರೂ ಮಹಾ ಬುದ್ಧಿವಂತರೆಂದು ನಾನು ತಿಳಿದುಕೊಂಡಿಲ್ಲ. ನಾನು ಏನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತಿದ್ದೇನೆಂದರೆ, ಇವೊತ್ತಿನ ದಿವಸ ಈ ಕಾನೂನು ಏನಿದೆ, ಈ ಕಾನೂನಿನಿಂದ ಆಗುವಂಥ ದುಷ್ಪರಿಣಾಮಗಳನ್ನು ತಮ್ಮ ಗಮನಕ್ಕೆ ತಂದು ಈ ಸದನದಲ್ಲಿ ಚರ್ಚೆಯಾಗಬೇಕಾದದ್ದು ಜನತಂತ್ರ ಹಿತದೃಷ್ಟಿಯಿಂದ ಅಗತ್ಯ ಎನ್ನುವ ಮಾತನ್ನು ಹೇಳಿದೆ. ಅಲ್ಲದೆ, ಅದಕ್ಕಿಂತ ಹೆಚ್ಚಾಗಿ ಇವೊತ್ತಿನ ದಿವಸ ನಮ್ಮ ರಾಜ್ಯಗಳಲ್ಲಿ ಯಾವುದು ವೆಟರ್ನರಿ ಆಸ್ಪತ್ರೆಗಳೆಂದು, ಯಾವುದು ಡಿಸ್‌ಪೆನ್ಸರಿಗಳೆಂದು ಕರೆಯುತ್ತೇವೆ......

ಶ್ರೀ ಸಿ. ಬೈರೇಗೌಡ:- ಮಾನ್ಯ ಅಧ್ಯಕ್ಷರೆ, ಪಾರ್ಲಿಮೆಂಟಿನಲ್ಲಿ ಆಗಿರತಕ್ಕಂಥ ಮತ್ತು ಇಲ್ಲಿ ಆಗಿರತಕ್ಕಂಥ ಎಷ್ಟೋ ಕಾನೂನುಗಳು ರಾಜ್ಯಾಂಗಕ್ಕೆ ವಿರುದ್ಧವಾಗಿದೆಯೆಂದು ಸುಪ್ರೀಂ ಕೋರ್ಟಿನಲ್ಲಿ ನೆಗೆದು ಬಿದ್ದಿವೆ. ನಾವು ಇಲ್ಲಿ ಮಾಡತಕ್ಕಂಥ ಕಾನೂನುಗಳೂ ಸಹ ಹೈಕೋರ್ಟಿಗೆ ಹೋಗುತ್ತವೆ, ಅಲ್ಲಿ ನೆಗೆದು ಬಿದ್ದುಹೋಗುತ್ತದೆ ಅಥವಾ ಅಗತ್ಯ ಬಿದ್ದರೆ ಸುಪ್ರೀಂ ಕೋರ್ಟಿಗೂ ಹೋಗುತ್ತವೆ; ಅಲ್ಲಿಯೂ ಕೂಡ ನೆಗೆದು ಬೀಳುತ್ತವೆ. ಆದುದರಿಂದ, ನಾವು ಇಲ್ಲಿ ಮಾಡತಕ್ಕಂಥಾದ್ದೆಲ್ಲವೂ ಸರಿಯಾಗಿರಬೇಕು, ಸರಿಯಾಗಿರುತ್ತದೆ ಎನ್ನತಕ್ಕಂಥಾದ್ದನ್ನು ನಾನು ಒಪ್ಪುತ್ತೇನೆ. ಆದರೆ, ಸರಿಯಾಗಿರುತ್ತದೆ ಎಂದು ನಾವು ಹೇಳಬೇಕಾದರೆ, ಅಷ್ಟು ಧೈರ್ಯ ನನಗಂತೂ ಕೂಡ ಇಲ್ಲ.

ಶ್ರೀ ಎಂ. ಮುನಿಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರಾದಂಥ ಮಾಧುಸ್ವಾಮಿಯವರು ಮಾತನಾಡಿದಂಥ ಧಾಟಿ ನೋಡಿದರೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಪಶುವೈದ್ಯ ಶಾಲೆಗಳಲ್ಲಿ ಎರಡು ಭಾಗಗಳಿದ್ದು, ಒಂದು ವಿ.ಡಿ. ಮತ್ತೊಂದು ಆರ್.ವಿ.ಡೀಯಾಗಿದೆ. ಈ ಆರ್‌ವಿಡಿ ಏನಿರುತ್ತದೆ, ಅಲ್ಲಿ ವೆಟರ್ನರಿ ಲೈವ್‌ಸ್ಟಾಕ್ ಇನ್ಸ್‌ಪೆಕ್ಟರ್‌ಗಳು ಮಾತ್ರ ಕೆಲಸ ಮಾಡುವುದಕ್ಕೆ ಸಾಧ್ಯ. ವಿ.ಡಿ. ಎನ್ನುವ ಕಡೆ ಅಂದರೆ ವೆಟರ್ನರಿ ಡಿಸ್‌ಪೆನ್ಸರಿ ಕಡೆ ಮಾತ್ರ ಬಿವಿ.ಎಸ್‌ಸಿ ಆದವರು ಅಂದರೆ ಯಾರು ಪದವಿ ಪಡೆದುಕೊಂಡು ಬಂದಿರುತ್ತಾರೋ, ಅವರು ಅಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಈಗಾಗಲೇ ಅನೇಕ ಜನರು ಯೂನಿವರ್ಸಿಟಿಯಲ್ಲಿ ಬಿವಿ.ಎಸ್‌ಸಿ ಮಾಡಿದಂತಹವರು ಉದ್ಯೋಗ ಇಲ್ಲದೆ ಬೀದಿಯಲ್ಲಿರಬೇಕಾದರೆ ಇವೊತ್ತು ಈ ಕಾನೂನನ್ನು ಪಾಸ್ ಮಾಡುವುದರಿಂದ ಅವರು ನಮ್ಮ ರಾಜ್ಯದಿಂದ ಹೊರಗಡೆ ಹೋಗಿ ಕೆಲಸ ಮಾಡಿದರೆ ನಮ್ಮ ರಾಜ್ಯಕ್ಕೂ ಗೌರವ

ಬರುತ್ತದೆನ್ನುವುದನ್ನು ನಾವುಗಳೆಲ್ಲರೂ ಒಪ್ಪಿ ಸರ್ವಾನುಮತದಿಂದ ಪಾಸ್ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಹಿರಿಯ ಸದಸ್ಯರಿಗೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಏಕಾಂತಯ್ಯ:- ನಾವು ಅವರಿಗೆ ಅರ್ಥಮಾಡಿಕೊಳ್ಳುವುದಕ್ಕೆ ಸಹಾಯ ಮಾಡಲಿಲ್ಲವೋ ಅಥವಾ ಅವರು ಅರ್ಥಮಾಡಿಕೊಳ್ಳಲಿಲ್ಲವೋ ಗೊತ್ತಿಲ್ಲ. ಚರ್ಚೆ ಪ್ರಾರಂಭ ಮಾಡೋಣ, ನನ್ನದೇನೂ ತಕರಾರಿಲ್ಲ. ನಾನು ಈಗಾಗಲೇ ಹೇಳಿದಂತೆ, ಮೊಟ್ಟಮೊದಲನೆಯದಾಗಿ ಶಾಸನಾತ್ಮಕ ನಿರ್ಣಯ ಏನಿದೆ, ಇದು ಸಂವಿಧಾನಕ್ಕೆ ವಿರೋಧವಾಗಿದೆ. ಅದು ಸಂವಿಧಾನಕ್ಕೆ ವಿರೋಧವಾಗಿರುವುದರಿಂದ, ಮತ್ತು ನಾನು ಈಗಾಗಲೇ ತಮ್ಮ ಗಮನಕ್ಕೆ ತಂದಂತೆ ಎರಡನೇ ಪ್ಯಾರಾದಲ್ಲಿ ಹೇಳಿರುವಂಥ ವಿಚಾರಗಳು......

ಅಧ್ಯಕ್ಷರು:- ಸಂವಿಧಾನಕ್ಕೆ ವಿರೋಧವಾಗಿದ್ದರೆ ಎಷ್ಟೋ ರಾಜ್ಯಗಳು 1984ರಿಂದ ಇದನ್ನು ದೃಢೀಕರಿಸುತ್ತಿರಲಿಲ್ಲ.

ಶ್ರೀ ಹೆಚ್. ಏಕಾಂತಯ್ಯ:- ನಾವು ಹೇಳುತ್ತಿರುವುದು ಈ ಕಾನೂನು ಸಂವಿಧಾನಕ್ಕೆ ವಿರೋಧವಾಗಿದೆ ಎನ್ನುವ ಮಾತನ್ನು ಹೇಳಲಿಲ್ಲ. ಇವೊತ್ತಿನ ದಿವಸ ಶಾಸನಾತ್ಮಕ ನಿರ್ಣಯದಲ್ಲಿ ತಾವು ಯಾವ ವಿಚಾರಗಳನ್ನು ಪ್ರಸ್ತಾಪಿಸಿದ್ದೀರಿ, ಇದು ಸಂವಿಧಾನಕ್ಕೆ ವಿರೋಧವಾದಂಥ ಅಂಶಗಳಿಂದ ಕೂಡಿದೆ.

ಅಧ್ಯಕ್ಷರು:- ಹೇಗೆ?

ಶ್ರೀ ಹೆಚ್. ಏಕಾಂತಯ್ಯ:- ಹೇಗೆಂದರೆ, ತಾವು ಒಂದು ಮಾತನ್ನು ಹೇಳಿದಿರಿ. ಕೇಂದ್ರ ಸರ್ಕಾರಕ್ಕೆ ಅಂದರೆ ಪಾರ್ಲಿಮೆಂಟಿಗೆ ಕನ್‌ಕರೆಂಟ್ ಲಿಸ್ಟ್‌ನಲ್ಲಿರತಕ್ಕ ವಿಷಯದಲ್ಲಿ ಕಾನೂನು ಮಾಡುವುದಕ್ಕೆ ಅಧಿಕಾರ ಇದೆಯೋ ಇಲ್ಲವೋ?

ಅಧ್ಯಕ್ಷರು:- ಇದೆ.

ಶ್ರೀ ಹೆಚ್. ಏಕಾಂತಯ್ಯ:- ಹಾಗಿದ್ದರೆ, ಇಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಇದು ಪಾರ್ಲಿಮೆಂಟ್‌ನಲ್ಲಿ ಪ್ರಸ್ತಾಪವಾಗಲಿಲ್ಲ. ಪಾರ್ಲಿಮೆಂಟಿನಲ್ಲಿ ಹೇಳಿದ್ದುದು ಕೇವಲ ಸ್ಟೇಟ್ ಲಿಸ್ಟ್‌ನಲ್ಲಿರುವುದು, 15 ಮತ್ತು 32 ಸೆಕೆಂಡ್ ಲಿಸ್ಟ್ ಇದೆ. ಇಷ್ಟು ಮಾತ್ರ ಇದಕ್ಕೆ ಸಂಬಂಧಪಟ್ಟಿದುದು. ಇದು ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿರುವುದರಿಂದ, ಕೇಂದ್ರ ಸರ್ಕಾರಕ್ಕೆ ಅಂದರೆ ಪಾರ್ಲಿಮೆಂಟಿಗೆ ಬೇರೆ ಯಾವುದೋ ಕಾನೂನಿನಡಿಯಲ್ಲಿ ಸಂವಿಧಾನದಡಿಯಲ್ಲಿರುವಂಥ ಪ್ರಕರಣಗಳ ಮುಖಾಂತರ ಕಾನೂನು ಮಾಡುವುದಕ್ಕೆ ಅಧಿಕಾರ ಇಲ್ಲದಿರುವುದರಿಂದ, ಇವೊತ್ತಿನ ದಿವಸ ನಾವು ಈ ಕಾನೂನನ್ನು ಆರ್ಟಿಕಲ್ 252(1)ರ ಪ್ರಕಾರ ಮಾಡುತ್ತೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಈ ಶಾಸನಾತ್ಮಕ ನಿರ್ಣಯದಲ್ಲಿ ಏನು ಹೊಗಳಿದ್ದಾರೆ. ಎಂಟ್ರಿ ನಂಬರ್ 26, 3ನೇ ಲಿಸ್ಟ್, ನಮ್ಮ ಸರ್ಕಾರದ ಅಭಿಪ್ರಾಯದಲ್ಲಿ ಏನು ಈ ವಿಚಾರಗಳು ಪ್ರಸ್ತಾಪವಾಗಿವೆ, ಇದು ಇಂಡಿಯನ್ ವೆಟರ್ನರಿ ಕೌನ್ಸಿಲ್ ಆಕ್ಟ್‌ನಲ್ಲಿ ಪ್ರಸ್ತಾಪ ಮಾಡಿರತಕ್ಕ ವಿಚಾರಗಳು ಕನ್ಕರೆಂಟ್ ಲಿಸ್ಟ್‌ನ 26ಕ್ಕೆ ಸಂಬಂಧಪಟ್ಟಿದ್ದುದು ಎಂದು ಹೇಳುತ್ತಾರೆ. ಇದು ತಪ್ಪು, ಒಂದು ವೇಳೆ ಇದು ಸರಿ ಎಂದು ಹೇಳುವುದಾದರೆ ಈ ಪ್ರಸ್ತಾವನೆಯನ್ನು ಇಲ್ಲಿ ಇಡಬೇಕಾದ ಅವಶ್ಯಕತೆ ಇಲ್ಲ. ಆದ್ದರಿಂದ ನಾನು ಕೇಳುತ್ತಿರುವುದು ನಮ್ಮ ಈ ಶಾಸನ ಸಭೆಯಲ್ಲಿ ಇಂಥ ವಿಷಯಗಳನ್ನು ಪ್ರಸ್ತಾಪ ಮಾಡುವಾಗ ನಾವು ಸಂವಿಧಾನಕ್ಕೆ ವಿರುದ್ಧವಾದಂಥ ಅಂಶಗಳನ್ನು ನಮೂದಿಸಿ ಪ್ರಸ್ತಾಪ ಮಾಡಿರುವುದರಿಂದ ಇದು ಈಗ ತಿದ್ದುಪಡಿ ಮಾಡತಕ್ಕ ಅವಶ್ಯಕತೆ ಇದೆ, ಅಥವಾ ತಿದ್ದುಪಡಿ ಮಾಡುವುದಕ್ಕೆ ಸಾಧ್ಯವಿಲ್ಲದಿದ್ದರೆ ಇದನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇದೆ.

SRI BLASIUS M.D'SOUZA:- This Resolution has been sent by the

Government of India. A similar Resolution has been passed by other States.

ಶ್ರೀ ಹೆಚ್. ಏಕಾಂತಯ್ಯ:- ಮಾನ್ಯ ಅಧ್ಯಕ್ಷರೆ, ತಮ್ಮ ಗಮನಕ್ಕೆ ಒಂದು ಅಂಶವನ್ನು ತರುತ್ತೇನೆ. ನಾವು ಹೇಳುತ್ತಿರುವುದೇನೆಂದರೆ It is a matter referred to in Entry-26 of the III List. This is an assertive Statement made by the State Government in its Resolution.

Mr.SPEAKER:- By the State Government?

ಶ್ರೀ ಹೆಚ್. ಏಕಾಂತಯ್ಯ:- ಯಾರು ಇಟ್ಟಿದ್ದಾರೆ, ಶಾಸನಾತ್ಮಕ ನಿರ್ಣಯ ನಾನು ಇಟ್ಟಿದ್ದೇನೆಯೆ?

MR.SPEAKER:- How does Article 252(1) come into the picture? As per your submission, if it is in the concurrent list then Article 252(1) does not come into the picture. You are seeking shelter under Article 252(1).

ಶ್ರೀ ಹೆಚ್. ಏಕಾಂತಯ್ಯ:- ಇಲ್ಲಿ ಇನ್ನೊಂದು ಮಾತನ್ನು ತಮ್ಮ ಗಮನಕ್ಕೆ ತರುವುದಾದರೆ.

SRI C.BYREGOWDA:- It is evident that the Government is also not clear in the matter. They are saying that some other States have adopted this Resolution and the Parliament has passed it. Taking shelter under this, the Government excepts us to accept this. The Government is also not very clear in the matter.

ಶ್ರೀ ವಾಟಾಳ್ ನಾಗರಾಜ್:- ಇನ್ನು 15-20 ದಿವಸದೊಳಗೆ ಮತ್ತೆ ಸದನ ಸೇರುತ್ತಿದೆ. ತಾಂತ್ರಿಕವಾದಂಥ ಚರ್ಚೆ ಮಾಡುವುದಕ್ಕೆ ಬದಲು....

ಶ್ರೀ ಬಿ.ಹೆಚ್. ಬನ್ನಿಕೋಡ್:- ಸರ್ಕಾರದವರು ಇದನ್ನು ಸ್ಕ್ರುಟಿನಿ ಮಾಡಲಿ, ಅಥವಾ ಇದರಲ್ಲಿರತಕ್ಕ ತಪ್ಪನ್ನಾದರೂ ಸರಿಪಡಿಸಿಕೊಳ್ಳಲಿ. ಅನಂತರ ಸವಿಸ್ತಾರವಾಗಿ ಚರ್ಚೆ ಮಾಡೋಣ. ಶಾಸಕರು ಅರ್ಥಮಾಡಿಕೊಳ್ಳುವುದಕ್ಕೆ ಆಗದೇ ಇರತಕ್ಕ ಇಂಥ ಶಾಸನವನ್ನು ಇಲ್ಲಿ ತರುವುದರಲ್ಲಿ ಯಾವುದೇ ಅರ್ಥವಿಲ್ಲ.

Sri M.VEERAPPA MOILY:- In the Concurrent List, the Medical Education or the Veterinary Education comes under the Professions. That comes under the concurrent list. As far as the other things are concerned Entry 15 and 32, it comes under the State List. This List 32 reads thus:

> "Incorporation, regulations and winding up of Corporation other than those specified in the List-I and Univiersities, unincorporated trading, literary, scietific, religious and other societies, associations and co-operatives."

Preservation come under the State List. The List-15 reads thus:

> "Preservation, protection and improvement of stock and prevention of animal diseases, veterinary training and practice."

This comes under the State List. You will have to adopt a Resolution on this in view of Item No. 15 of II List and Item No.32. They come under the State List. That is well in order. The Government of India and the Parliament considered it. That is why it has come to the Stage.

ಶ್ರೀ ಹೆಚ್. ಏಕಾಂತಯ್ಯ:- ಪುನಃ ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಲಿಕ್ಕೆ ಇಷ್ಟ ಇರಲಿಲ್ಲ. ಇದು ಸ್ಟೇಟ್‌ಲಿಸ್ಟ್‌ನಲ್ಲಿ ಇಲ್ಲವೆಂದು ನಾನು ಹೇಳಿಲ್ಲ. They are trying both things at a time. Again I will read para-2.

> "And whereas the subject matter of such a law is relatable mainly to matters enumerated in Entreis 15 and 32."

ಇದು ಅಲ್ಲಿಗೇ ನಿಂತಿಲ್ಲ. ಇದನ್ನು ಒಪ್ಪಿಕೊಳ್ಳುತ್ತೇನೆ. ಇದು 15 ಮತ್ತು 32ನೇ ಪೇಜ್‌ನಲ್ಲಿ ಏನಿದೆ ಅದಕ್ಕೆ ಮಾತ್ರ ಸಂಬಂಧಪಟ್ಟಂತೆ ಆರ್ಟಿಕಲ್ 252(1) ಬರುತ್ತದೆ. But, when you make an assertive statement in the Resolution stating

> "That the matter refers also to entry-256 of the List-II i.e., the Concurrent List."

How the jurisdiction goes to the Parliament under Article 252(1)? ಐಟಂ ನಂ.26 ಏನಿದೆ ಇದರಲ್ಲಿ 246(2) ಒಂದೇ ಬರಬೇಕು. ನಾನು ಇದನ್ನು ವಿರೋಧ ಮಾಡುತ್ತೇನೆಂದು ಹೇಳುವುದಕ್ಕೆ ತಯಾರಿಲ್ಲ. ಸರ್ಕಾರ ಮತ್ತು ತಮ್ಮ ಸಹಕಾರದಿಂದ ಇವತ್ತೇ ಇದನ್ನು ಪಾಸ್ ಮಾಡುವುದಕ್ಕೆ ಕೂಡ ನನ್ನ ವಿರೋಧವಿಲ್ಲ.

Sri M.VEERAPPA MOILY:- ತಾವು ಹೇಳುವುದರ ಬಗ್ಗೆ ವಿವಾದ ಇಲ್ಲ. We have no objection for his argument but this argument will have to be advanced in the Parliament and not in the State.

ಶ್ರೀ ಹೆಚ್. ಏಕಾಂತಯ್ಯ:- ಅದು ಅವರ ಅಭಿಪ್ರಾಯ ಇರಬಹುದು. 7ನೇ ಷೆಡ್ಯೂಲ್‌ನಲ್ಲಿ ಇರತಕ್ಕ 3ನೇ ಕನ್‌ಕರೆನ್ಸ್ ಲಿಸ್ಟ್‌ನಲ್ಲಿ 26ನೇ ಪಟ್ಟಿಗೆ ಸಂಬಂಧಪಟ್ಟಂಥ ವಿಷಯವಾಗಿದೆ ಎನ್ನತಕ್ಕ ಮಾತನ್ನು ಸರ್ಕಾರ ಈ ರೆಸಲ್ಯೂಷನ್‌ನಲ್ಲಿ ಹೇಳಿರುವುದರಿಂದ this cannot be a Resolution under Article 252(2). 252(2)ನಲ್ಲಿ ಯಾವುದು ಬರಬೇಕೆಂದರೆ 252(1)ರಲ್ಲಿ ಏನಿದೆ ಅದು ಮಾತ್ರ 252(2)ರಲ್ಲಿ ಬರಬೇಕು.

If it appears to the Legislature of two or more States to be desirable that any of the matter with respect to which the Parliament has no power to make laws.

Mr.Speaker Sir, only in such cases the Parliament has no power to make laws. But, here is a case, where they refer to Entry No.26 of III List i.e., the concurrent list. According to Article 246(2), the Parliament has powers to enact laws. Therefore, the very enactment as such, the very Resolution as such under Article 252(2)is repugnant to contrary to Article 252(1). Further it reads thus:

"It has no power to make laws for the State except as provided in Articles 214 and 215. (That is Emergency Sir) should be regulated in such States by

Parliament, by law and if Resolutions to that effect are passed by all the Houses of Legislatures, it shall be lawful for the Parliament to pass and Act for regulating that matter accordingly and any Act so passed shall apply to such State and to any other States." "..by which it is adopted afterwards by a Resolution passed in that behalf by the House or where there are two Houses, by each of the Houses of the Legislature of the State". ನನ್ನ ಮುಖ್ಯವಾದ ವಾದ ಏನೆಂದರೆ, 252ನೇ ಕಾನೂನಿನ ಪ್ರಕಾರ ಯಾವುದೇ ರಾಜ್ಯಸರ್ಕಾರಗಳಿಗೂ ವಿಸ್ತರಣೆ ಮಾಡುವುದಕ್ಕೆ ಪಾರ್ಲಿಮೆಂಟ್‌ಗೆ ಅಧಿಕಾರ ಇರುವುದಿಲ್ಲ ಆಗ ಮಾತ್ರ 252(1) ಬರುತ್ತದೆ. ಆದರೆ ಈ ವಿಚಾರದಲ್ಲಿ ಸರ್ಕಾರ ಹೇಳಿರತಕ್ಕ ರೀತಿಯಲ್ಲಿ because it refers to Entry 26 of the Concurrent List, because the Central Government i.e., the Parliament, has powers under Article 246 (2)...

MR.SPEAKER:- You also referred to two entries made under Article 252(1).

